ಆಂತರಿಕ ಪ್ರಸಾರಕ್ಕಾಗಿ ಮಾತ್ರ

ಸೆಪ್ಟೆಂಬರ್ 2012 ಸಂಪುಟ 5 ಸಂಚಿಕೆ 5

ಶ್ರೀ ರಾಮಚಂದ್ರ ಮಿಷನ್®

India ECHOES
ONE WORLD ONE HUMANITY





“ನಿಮ್ಮ ಪ್ರತಿಕ್ರಿಯೆ, ನಿಮ್ಮ ಮಿತಿಮೀರಿದ ಸಂಖ್ಯೆಯ ಪ್ರತಿಕ್ರಿಯೆಯು ನನಗೆ, ನನ್ನ ಗುರುದೇವ ಬಾಬೂಜಿ ಮಹಾರಾಜರು ಏನನ್ನು 'ಪಿಸುಮಾತುಗಳ'ಲ್ಲಿ ಮತ್ತೆ ಮತ್ತೆ ಬರೆಯುತ್ತಾರೋ ಅದು ಸತ್ಯ: ಅಂದರೆ ಹೃದಯಗಳು ಸತ್ಯತೆಗೆ ತೆರೆದುಕೊಳ್ಳಲಾರಂಭಿಸಿವೆ, ಜನರು ಆಧ್ಯಾತ್ಮಿಕ ಜೀವನವನ್ನು ಹೆಚ್ಚು ಹೆಚ್ಚು ಬಯಸುತ್ತಾರೆ, ತಮ್ಮನ್ನೇ ಹೆಚ್ಚು ಹೆಚ್ಚು ಸಮರ್ಪಿಸಿಕೊಳ್ಳಲು, ಮತ್ತು ಅದಕ್ಕೆ ಸ್ವತಃ ತಮ್ಮನ್ನೇ ಹೆಚ್ಚು ಹೆಚ್ಚು ನೀಡಲು ಇಚ್ಛಿಸುತ್ತಿದ್ದಾರೆ, ಎಂಬುದನ್ನು ಸೂಚಿಸುತ್ತಿದೆ. ಇದೊಂದು ಅತ್ಯುತ್ತಮ ಲಕ್ಷಣ.”

15ರ ಆಗಸ್ಟ್, 2012. ಮಣಪಾಕ್ಕಂ, ಚೆನ್ನೈ.


# ಚಾರಿತ್ರಿಕ ಏಕದಿನ ಭಂಡಾರ

## ಅಗಸ್ಟ್ 15, 2012ರಂದು ಚೆನ್ನೈ, ಮಣಪಾಕ್ಕಂ

ಗುರುಗಳು ಅಗಸ್ಟ್ 11, 2012ರಂದು ಸೋ. ಕಮಲೇಶ್ ಪಟೇಲ್‌ರವರಲ್ಲಿ, ಮಣಪಾಕ್ಕಂನ ಬಾಬೂಜಿ ಸ್ಮಾರಕ ಆಶ್ರಮದಲ್ಲಿ ಮಿಷನಿನ ಕಾರ್ಯಕಾರಿ ಸಮಿತಿಯ ವಿಶೇಷ ಸಭೆಯೊಂದನ್ನು ಅಗಸ್ಟ್ 15ರಂದು ಕರೆಯುವಂತೆ ಹೇಳಿದರು. ಮರುದಿನ ಸಂಜೆ ಗುರುಗಳು ಮಣಪಾಕ್ಕಂ ಆಶ್ರಮದ ವ್ಯವಸ್ಥಾಪಕರನ್ನು ಕರೆದು ಮಣಪಾಕ್ಕಂ ಆಶ್ರಮದಲ್ಲಿ ಆ ದಿನದಂದು ವಿಶೇಷ ಏಕದಿನ ಭಂಡಾರವನ್ನು ಇಟ್ಟುಕೊಳ್ಳುವ ತನ್ನ ಇರಾದೆಯನ್ನು ತಿಳಿಸಿದರು. ಎಲ್ಲ ಅಭ್ಯಾಸಿಗಳನ್ನು ಆ ಭಂಡಾರಕ್ಕೆ ಆಮಂತ್ರಿಸಲಿಕ್ಕಾಗಿ, ಸಹಜಸಂದೇಶದ ಮೂಲಕ ಅಭ್ಯಾಸಿಗಳಿಗೆ ರವಾನಿಸಲೆಂದು ಪತ್ರವೊಂದನ್ನು ಹೇಳಿ ಬರೆಯಿಸಿದರು. ಅದು ಅಭ್ಯಾಸಿಗಳ ಒಂದು ವಿಶೇಷ ಸರ್ವಸದಸ್ಯರ ಸಭೆಯಾಗಲಿತ್ತು. ಪೂರ್ವಾಹ್ನ 6.30, 11.00 ಮತ್ತು ಅಪರಾಹ್ನ 4.30ಕ್ಕೆ ಮೂರು ಸತ್ಸಂಗಗಳನ್ನು ಆಯೋಜಿಸಲಾಗಿತ್ತು.

ಗುರುಗಳು ಮೂತ್ರನಾಳ ಮತ್ತು ಕರುಳುಗಳ ಸೋಂಕಿಗೊಳಗಾಗಿ ಜುಲೈ 5ರಿಂದ ಚಿಕಿತ್ಸೆಯ ಅತಿಕ್ಲೇಷಕರ ಅವಧಿಯನ್ನು ಅನುಭವಿಸಿದ್ದು ಹೇಳತೀರದ ಕಷ್ಟವನ್ನು ಗೊಣಗಾಟವಿಲ್ಲದೆ ಎಂದಿನಂತೆ ಸಹಿಸಿಕೊಂಡಿದ್ದರು. ಮಿಷನ್ನಿನ ಅಭ್ಯಾಸಿಗಳಿಗೆ ಸಹ ಅದೊಂದು ಆತಂಕದ ಸಮಯವಾಗಿತ್ತು. ಸಾಮಾನ್ಯ ಆಹಾರಸೇವನೆಯಿಲ್ಲದೆ ಗುರುಗಳ ತೂಕ ಇಳಿದಿದ್ದು ಅವರು ತನ್ನ ಜೀವನದಲ್ಲೆ ದೀರ್ಘಾವಧಿಗೆ ಹಾಸಿಗೆ ಬಿಟ್ಟೇಳದಂತಾಗಿದ್ದರು. ಈ ಕಾರಣದಿಂದಾಗಿ ಭಂಡಾರದ ಅವರ ಕರೆ ಜಗತ್ತಿನೆಲ್ಲೆಡೆಯ ಅಭ್ಯಾಸಿಗಳನ್ನು ಆಶ್ಚರ್ಯಚಕಿತರನ್ನಾಗಿಸಿತ್ತು, ಆದರೆ ಅವರ ಹೃದಯದ ಕರೆಯು ಎರಡುದಿನಗಳೊಳಗಾಗಿ ಮಣಪಾಕ್ಕಂಗೆ ಇಪ್ಪತ್ತೊಂದು ಸಾವಿರ ಅಭ್ಯಾಸಿಗಳನ್ನು ಕರೆತಂದಿತ್ತು!





ಗುರುಗಳು ಒಂದು ದಿನವಷ್ಟೇ ಮೊದಲು, ಅಗಸ್ಟ್ 11ರಂದು PET/CT ಸ್ಕ್ಯಾನ್‌ಗೆ ಒಳಗಾಗಿದ್ದು, ಅದು ನಿಚ್ಚಳವಾಗಿತ್ತು ಮತ್ತು ಎಲ್ಲೂ ಸ್ಥಳೀಕ ಸೋಂಕು ಇರಲಿಲ್ಲ. ಇದೊಂದು ಉತ್ತಮ ವರ್ತಮಾನವಾಗಿದ್ದು, ಈ ಫಲಿತಾಂಶದಿಂದ ವೈದ್ಯರುಗಳೆಲ್ಲ ಸಂತೋಷವಾಗಿದ್ದರು. ಗುರುಗಳು ತಮಾಷೆಯಾಗಿ ಹೇಳಿದರು, "ಈಗ ಈ ಪರಿಶೀಲನೆಯು ನನಗೇನೂ ಸಮಸ್ಯೆಗಳಿಲ್ಲವೆಂದು ಹೇಳಿದೆ, ಈಗೇಕೆ ಈ ವೈದ್ಯರುಗಳು ನನಗೆ ಔಷಧಿಗಳನ್ನು ಕೊಡುತ್ತಿದ್ದಾರೆ?" ಆ ಕೋಣೆಯಲ್ಲಿದ್ದ ಪ್ರತಿಯೊಬ್ಬರೂ ಮನಸಾರೆ ನಕ್ಕಿದ್ದರು.


ಭಂಡಾರದ ಕುರಿತಾದ ಸುತ್ತೋಲೆ ಹೊರಬಿದ್ದ ಕೂಡಲೇ, ಅಲ್ಲಿ ಕೇವಲ ಮೂರೇ ದಿನಗಳು ಉಳಿದಿದ್ದ ಕಾರಣ ಸಿದ್ಧತೆಗಳು ಅತ್ಯುತ್ಸಾಹದಿಂದ ಆರಂಭವಾದವು. ತಿರುಪುರದಲ್ಲಿ ನಮ್ಮ ಭಂಡಾರಗಳಿಗಾಗಿ ಮೂಲಭೂತ ಸೌಕರ್ಯಗಳನ್ನು ಹಾಕುವುದರಲ್ಲಿ ಒಳ್ಳೆಯ ಅನುಭವವಿರುವ ನಂಬಿಗಸ್ಥ, ಬೆಂಗಳೂರಿನ ಶ್ರೀ ಫ್ರಾನ್ಸಿಸ್ ಅವರನ್ನು ಅವರ ಸಲಕರಣೆಗಳು ಮತ್ತು ತಂಡದೊಂದಿಗೆ ಕರೆಸಲಾಯಿತು. ತಿರುಪುರದಿಂದ ಬಂದ ಸ್ವಯಂಸೇವಕರು ಕೂಡಾ ಸವಾಲಿಗೆ ಸಿದ್ಧರಾಗಿ, ನಿರೀಕ್ಷಿಸಲ್ಪಟ್ಟ ಸುಮಾರು ಹತ್ತು-ಹದಿನೈದು ಸಾವಿರ ಅಭ್ಯಾಸಿಗಳಿಗೆ ಸೌಲಭ್ಯಗಳನ್ನು ಕಲ್ಪಿಸಿಕೊಡಲು ಕಾರ್ಯೋನ್ಮುಖರಾದರು. ಆಶ್ರಮ ಪರಿಸರವಿಡೀ ಗುಡಾರಗಳು ಮತ್ತು ಚಪ್ಪರಗಳಿಂದ ತುಂಬಿತು. ಆಶ್ರಮದ ಸಮತಟ್ಟಾದ ಮತ್ತು ತೆರೆದ ಯಾವುದೇ ಜಾಗವೂ ಧ್ಯಾನ ಅಥವಾ ವಸತಿಯ ಸಲುವಾಗಿ ಗುಡಾರಗಳಿಂದ ಆವೃತವಾಯಿತು. ಧ್ಯಾನಮಂದಿರದ ಎರಡೂ ಬದಿಯ ಸುಮಾರು 25,000 ಚ.ಅಡಿಗಳ ಜಾಗವು ನಾಲ್ಕು ಟೆಂಟುಗಳಿಂದ ಕೂಡಿ ಸಿದ್ಧವಾಯಿತು ಮತ್ತು ಇನ್ನೊಂದು 30,000 ಚ. ಅಡಿಗಳ ವಿಸ್ತೀರ್ಣದಲ್ಲಿ ವಸತಿಗಾಗಿ ಚಪ್ಪರಗಳು ಹಾಕಲ್ಪಟ್ಟವು.

ವಸತಿಯದು ಒಂದು ದೊಡ್ಡ ಸವಾಲೇ ಆಗಿತ್ತು. ಆಶ್ರಮದ ಹತ್ತಿರ ವಾಸಿಸುತ್ತಿದ್ದ ಬಹುತೇಕ ಎಲ್ಲ ಅಭ್ಯಾಸಿಗಳು ತಮ್ಮ ಮನೆಗಳನ್ನು ಭೇಟಿಕೊಡಬರುತ್ತಿರುವ ಅಭ್ಯಾಸಿಗಳಿಗೆ ಉಳಿದುಕೊಳ್ಳಲು ಲಭ್ಯವಾಗುವಂತೆ ಮಾಡಿದರು. ಈ ಹಂಚಿಕೊಳ್ಳುವ ಮತ್ತು ಒಟ್ಟಿಗೆ ಇರುವ ಪ್ರಕ್ರಿಯೆಯಲ್ಲಿ ಒಂದು ನಿಜವಾದ ಭ್ರಾತೃತ್ವದ ಅನುಭವವಾಯಿತು. ಆಶ್ರಮ ಮತ್ತು ಅಭ್ಯಾಸಿಗಳ ಮನೆಗಳಲ್ಲದೆ, ಒಮೇಗಾ ಶಾಲೆಯಲ್ಲೂ ಸುಮಾರು 1500 ಅಭ್ಯಾಸಿಗಳಿಗೆ ಆಶ್ರಯ ಕಲ್ಪಿಸಿಕೊಡಲಾಗಿತ್ತು. ಮತ್ತು ಹತ್ತಿರದ ಚಚೊರ್ಂದರ ಉತ್ತಮ ಸೌಕರ್ಯಗಳುಳ್ಳ ಒಂದು ಕಲ್ಯಾಣಮಂಟಪ ಕೂಡಾ ಸುಮಾರು 900 ಅಭ್ಯಾಸಿಗಳಿಗೆ ವಸತಿಕಲ್ಪಿಸಿಕೊಟ್ಟಿತು. ಒಟ್ಟಿನಲ್ಲಿ, ವಸತಿಸೌಲಭ್ಯದ ಅಗತ್ಯತೆಗಳೆಲ್ಲವೂ ಅತ್ಯಂತ ಸುಸೂತ್ರವಾಗಿ ನಿಭಾಯಿಸಲ್ಪಟ್ಟವು.

ಸಂದರ್ಭಕ್ಕಾಗಿ ಆಶ್ರಮವು ಅಲಂಕರಿಸಲ್ಪಡಬೇಕೆಂಬುದು ಗುರುಗಳ ಆಶಯವಾಗಿದ್ದ ಕಾರಣ ಆಗಸ್ಟ್ 14ರ ರಾತ್ರಿಯ ಹೊತ್ತಿಗೆ ದೀಪಾಲಂಕಾರ ಮತ್ತು ಸಿಂಗರಿಸುವ ಕೆಲಸ ನಡೆದಿತ್ತು. ಧ್ಯಾನಮಂದಿರ, ಗುರುಗಳ ಕುಟೀರ, ಬಾಬೂಜಿ ಮಂಟಪ, ರುಚಿ ಕೆಫೆ ಮತ್ತು ಆಶ್ರಮ ಪ್ರವೇಶದ್ವಾರ ಮತ್ತು ಆಶ್ರಮದ ಹೆಚ್ಚಿನ ಎಲ್ಲ ಭಾಗಗನ್ನು ಪುಷ್ಪಗಳು, ದೀಪಗಳು ಮತ್ತಿತರ ಅಲಂಕಾರಗಳಿಂದ ಶೃಂಗರಿಸಲಾಯಿತು. ಅಲಂಕಾರಗಳ ಕುರಿತಾದ ಮತ್ತು ಆಶ್ರಮವು ದೇದೀಪ್ಯಮಾನವಾಗಿ, ಶುಭ್ರವಾಗಿ ಕಂಗೊಳಿಸುತ್ತಿದ್ದು, ಅಭ್ಯಾಸಿಗಳಿಂದ ತುಂಬಿತುಳುಕುತ್ತಿದೆಯೆಂಬ ವಿಷಯ ಗುರುಗಳನ್ನು ತಲಪಿತು. ಎಲ್ಲರೂ ಆಶ್ಚರ್ಯಚಕಿತರಾಗುತ್ತಿದ್ದಂತೆ, ಗುರುಗಳು ಗಾಲಿಕುರ್ಚಿಯನ್ನೇರಿ ಆಶ್ರಮದಲ್ಲಿ ಒಂದು ಸುತ್ತು ಹಾಕಿಬರಲು ನಿಶ್ಚಯಿಸಿದರು. ಆರಂಭದಲ್ಲಿ ಅವರು ವೈದ್ಯರಲ್ಲಿ ತನ್ನನ್ನು ಕುಟೀರದ ಪಡಸಾಲೆಗೆ ಕರೆದುಕೊಂಡು ಹೋಗಲು ಮಾತ್ರ ಹೇಳಿದರು. ಬಾಬೂಜಿ ಮಂಟಪದ ದೀಪಗಳು ಮತ್ತು ಅಲಂಕಾರವನ್ನು ನೋಡಿದಾಗ ಅಲ್ಲಿಗೆ ತನ್ನನ್ನು ಕರೆದುಕೊಂಡು ಹೋಗಲು ಹೇಳಿದರು. ಅವರು ಹಿಂದಕ್ಕೆ ಬರುತ್ತಿರುವಂತೆ ಕೈಯನ್ನೆತ್ತಿ ಕುಟೀರದ ಮುಖ್ಯ ದ್ವಾರದತ್ತ ಸೂಚಿಸಿದರು. ಅಲ್ಲಿಂದ ಅವರು ಧ್ಯಾನಮಂದಿರದ ಶೃಂಗಾರವನ್ನು ನೋಡುವ ಸಲುವಾಗಿ ಮಾತ್ರ ಅತ್ತ ಮುಂದುವರಿದರು. ಅವರು ಧ್ಯಾನ ಮಂದಿರವನ್ನು ಹೊಸದಾಗಿ















ರಚಿಸಿದ ಇಳುಕಲಿನ ಮೂಲಕ ಪ್ರವೇಶಿಸಿದರು ಮತ್ತು ಧ್ಯಾನಮಂದಿರವನ್ನು ನೋಡಲು ವೇದಿಕೆಗೆ ಹೋದರು. ಆಗ ರಾತ್ರಿ ಸುಮಾರು 8.00 ಗಂಟೆಯಾಗಿತ್ತು. ಅಲ್ಲಿ ಕೆಲಸಮಾಡುತ್ತಿದ್ದ ಅಭ್ಯಾಸಿಗಳೆಲ್ಲ ಗುರುಗಳನ್ನು ಅಲ್ಲಿ ನೋಡಿ ಆಶ್ಚರ್ಯಚಕಿತರಾದರು. ಧ್ಯಾನಮಂದಿರವು ಎಲ್ಲೆಡೆಯೂ ಮೇಲ್ಛಾವಣಿಯ ಮಟ್ಟದಿಂದ ಕಂಬಗಳ ಮೇಲ್ತುದಿಗೆ ರೋಮನ್ ಶೈಲಿಯಲ್ಲಿ ತೂಗಾಡುತ್ತಿದ್ದ ನೆರಿಗೆಪರದೆಗಳೊಡನೆ ಪುಷ್ಪಾಲಂಕಾರದಿಂದ ಶೃಂಗರಿಸಲ್ಪಟ್ಟಿತ್ತು. ಗುರುಗಳು ಕುಟೀರಕ್ಕೆ ಮರಳಿಬಂದರು ಮತ್ತು ಹಿಂದಿರುಗುವಾಗ ಅವರ ಮುಖದಲ್ಲಿದ್ದ ಉತ್ಸಾಹವನ್ನು ಯಾರೂ ಕಾಣಬಹುದಾಗಿತ್ತು.

ಅಭ್ಯಾಸಿಗಳು ಬಹುಸಂಖ್ಯೆಗಳಲ್ಲಿ ಆಶ್ರಮಕ್ಕೆ ಬರುತ್ತಲೇ ಇದ್ದರು. ಎಲ್ಲೆಲ್ಲಿಯೂ ಅಭ್ಯಾಸಿಗಳೇ; ಅಲ್ಲಿ ಖಾಲಿ ಜಾಗವೇ ಇರಲಿಲ್ಲ; ಇಡೀ ರಾತ್ರಿ ನಿದ್ರಿಸಿದವರೇ ಅಪರೂಪ. ಹೇಗಿದ್ದರೂ, ಗಮನಿಸಬಹುದಾಗಿದ್ದ ಒಂದು ಸಂಗತಿಯೆಂದರೆ ಈ ಕಿಕ್ಕಿರಿದು ತುಂಬಿದ ಸನ್ನಿವೇಶದಲ್ಲಿ ಕೂಡಾ ಅಲ್ಲಿ ಗಲಿಬಿಲಿ ಗದ್ದಲಗಳಿಲ್ಲದೆ ಸುವ್ಯವಸ್ಥೆ ಮತ್ತು ಸಮಾಧಾನವನ್ನು ಕಾಪಾಡಿಕೊಳ್ಳಲಾಗಿತ್ತು. ಎಲ್ಲೆಡೆಯೂ ಸಹಾಯಕ ಹಸ್ತಗಳು ಕಾಣಿಸುತ್ತಿದ್ದವು. ಮುಂಜಾನೆ 6.30ರ ಸತ್ಸಂಗವು ಒಂದು ಗಂಟೆಯ ಅವಧಿಯದಾಗಿದ್ದು ಸೋ. ಕಮಲೇಶ್ ಪಟೇಲ್ ಅದನ್ನು ನಡೆಸಿಕೊಟ್ಟರು. ಸತ್ಸಂಗ ಮುಗಿದ ನಂತರ ಅಭ್ಯಾಸಿಗಳು ಧ್ಯಾನಮಂದಿರದಿಂದ ಹೊರಬರಲಾರಂಭಿಸಿದಾಗ, ಧ್ಯಾನಮಂದಿರದಿಂದ ಆ ನೋಟವು ನೋಡತಕ್ಕ ದೃಶ್ಯವಾಗಿತ್ತು. ಪ್ರಶಾಂತತೆ ಮತ್ತು ಸ್ವಯಂಶಿಸ್ತು ಎದ್ದುಕಾಣುತ್ತಿದ್ದು ಆ ಲಯವನ್ನು ಮುರಿಯಲು ಯಾವ ಅಭ್ಯಾಸಿಯೂ ಯತ್ನಿಸಲಿಲ್ಲ, ಗುರುಗಳನ್ನು ನೋಡಲೆಂದು ಕುಟೀರದೊಳಗೆ ಹೋಗಲು ಕೂಡಾ ಯಾರೂ ಯತ್ನಿಸಲಿಲ್ಲ.

ಪೂರ್ವಾಹ್ನ 9.30ಕ್ಕೆ ಗುರುಗಳು ಧ್ಯಾನಮಂದಿರಕ್ಕೆ ಬರಲು ಉದ್ದೇಶಿಸಿದ್ದಾರೆಂದು ಪ್ರಕಟಿಸಲಾಗಿತ್ತು ಮತ್ತು ಅದಕ್ಕಾಗಿ ಮರು ಸಮಾವೇಶಗೊಳ್ಳಬೇಕೆಂದು ಅಭ್ಯಾಸಿಗಳೆಲ್ಲ ಕೇಳಿಕೊಳ್ಳಲಾಗಿತ್ತು. ಖಂಡಿತವಾಗಿಯೂ ಇದು ಆ ದಿನದ ಅತ್ಯಧಿಕ ನಿರೀಕ್ಷಣೆಯ ಘಟನೆಯಾಗಿತ್ತು. ಪೂರ್ವಾಹ್ನ ಸುಮಾರು 10.30ಕ್ಕೆ ಗುರುಗಳು, ಅವರ ಉಸಿರಾಟಕ್ಕೆ ಸಹಾಯಕವಾಗುವ ಆಮ್ಲಜನಕದ ಸಿಲಿಂಡರಿನೊಂದಿಗೆ ಸಜ್ಜುಗೊಂಡ ಗಾಲಿಕುರ್ಚಿಯೊಂದರಲ್ಲಿ ಆಗಮಿಸಿದರು. ಇತ್ತೀಚೆಗಿನ ಅಸ್ವಸ್ಥತೆಯು ಅವರ ಭೌತಿಕ ಶರೀರದ ಮೇಲೆ ಅತೀವ ಹಾನಿಯನ್ನು ಉಂಟುಮಾಡಿದ್ದು ಅವರು ಗಣನೀಯವಾಗಿ ನಿಶ್ಶಕ್ತರಾಗಿದ್ದು ಪ್ರತಿಯೊಂದು ಮಾತು ಅಥವಾ ಚಲನೆಯೂ ಅವರ ಭೌತಿಕ ಶರೀರದ ಮೇಲೆ ಪ್ರಯಾಸದಂತೆ ಕಾಣುತ್ತಿದೆ. ಅಲ್ಲಿ ಉಪಸ್ಥಿತರಿದ್ದ ಹೆಚ್ಚಿನ ಅಭ್ಯಾಸಿಗಳು ಗುರುಗಳ ಆರೋಗ್ಯದ ಬಗೆಗಿನ ಆತಂಕದ ಸುದೀರ್ಘ ಅವಧಿಯ ನಂತರ ಅವರನ್ನು ನೋಡುತ್ತಿದ್ದು ತಮ್ಮೆದುರು ಅವರನ್ನು ಕಾಣುತ್ತಿರುವುದಕ್ಕೆ ಸಂತೋಷಗೊಂಡಿರುವುದು ಸುಸ್ಪಷ್ಟವಾಗಿತ್ತು. ಗುರುಗಳು ತನ್ನ ಪ್ರಸಕ್ತ ಅಸ್ವಸ್ಥತೆಯ ಬಗ್ಗೆ ಮತ್ತು ಅದು ತನ್ನ ಮೇಲೆ ಹೇಗೆ ಪರಿಣಾಮ ಬೀರಿದೆ ಎಂಬುದನ್ನು ಹೇಳಿದರು. ತಾನು ಮಿಷನ್ನಿನ ಅಧ್ಯಕ್ಷ ಪದವಿಗೆ ರಾಜಿನಾಮೆ ಇತ್ತು ತನ್ನ ಸ್ಥಾನದಲ್ಲಿ ಸೋ. ಕಮಲೇಶ್ ಅವರನ್ನು ನೇಮಕ ಮಾಡಬೇಕೆಂದು ಬಯಸಿರುವುದನ್ನು ಅವರು ಹೇಳಿದರು. ಕಾರ್ಯಕಾರಿ ಸಮಿತಿಯ ಸದಸ್ಯರು ಇದಕ್ಕೆ ಒಪ್ಪುವರೇ ಎಂದು ಅವರನ್ನು ಕೇಳಿದರು. ಆದರೆ ಅವರುಗಳು ಪರ್ಯಾಯವೊಂದನ್ನು ಸೂಚಿಸಿ, ಗುರುಗಳು ಅಧ್ಯಕ್ಷರಾಗಿ ಮುಂದುವರಿಯಬೇಕೆಂದೂ ಸೋದರ ಕಮಲೇಶ್ ಅವರನ್ನು ಉಪಾಧ್ಯಕ್ಷರನ್ನಾಗಿ ಮಾಡಬಹುದೆಂದೂ ಸೂಚಿಸಿದರು. ಗುರುಗಳು ನೆರೆದಿದ್ದ ಸಭೆಯ ಅಭಿಪ್ರಾಯವನ್ನು ಕೇಳಿದಾಗ ಸಭಿಕರು ಕಿವಿಗಡಚಿಕ್ಕುವ ಚಪ್ಪಾಳೆಯ ಮೂಲಕ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದರು. ಉಪಾಧ್ಯಕ್ಷರು, ಅಧ್ಯಕ್ಷರ ಅಧಿಕಾರಗಳು, ಕರ್ತವ್ಯಗಳು ಮತ್ತು ಜವಾಬ್ದಾರಿಗಳನ್ನು ಗುರುಗಳ ನೇರ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆಯಲ್ಲಿ ಬಳಸುವರೆಂದು ಗುರುಗಳು ಹೇಳಿದರು. ಇದಾದ ನಂತರ, ಗುರುಗಳು ಹದಿನೈದು ನಿಮಿಷಗಳ ಅವಧಿಯ ಕಿರು ಸತ್ಸಂಗವನ್ನು ನಡೆಸಿಕೊಟ್ಟರು. ಆ ಬಳಿಕ ಅವರು ಕುಟೀರಕ್ಕೆ ಮರಳಿದರು. ಸಾಯಂಕಾಲದ ಸತ್ಸಂಗವನ್ನು ಸೋ. ಕಮಲೇಶ್ ಪಟೇಲ್ ನಡೆಸಿಕೊಟ್ಟರು. ಸತ್ಸಂಗದ ಮೊದಲು ಮಿಷನ್ನಿನ ಕಾರ್ಯದರ್ಶಿ ಮತ್ತು ಉಪಕಾರ್ಯದರ್ಶಿಯವರು ಬೆಳಗಿನ ಘಟನೆಗಳನ್ನು ಮತ್ತು ಕಾರ್ಯಕಾರಿ ಸಮಿತಿಯು ಅಂಗೀಕರಿಸಿದ ಠರಾವನ್ನು ಸ್ಪಷ್ಟಪಡಿಸಿ, ಉಪಾಧ್ಯಾಕ್ಷರನ್ನಾಗಿ ಸೋ.










ಕಮಲೇಶ್ ಪಟೇಲ್‌ರವರ ನೇಮಕಾತಿಯ ಬರಹಪ್ರತಿಯನ್ನು ಸಭೆಗೆ ಓದಿಹೇಳಿದರು.

ಸತ್ಸಂಗದ ನಂತರ ಸೋ.ಕಮಲೇಶ್ ಪಟೇಲ್ ಮಾತನಾಡಿ ಎರಡು ಪ್ರಮುಖ ಅಂಶಗಳನ್ನು ಕುರಿತು ಹೇಳಿದರು: ಮೊದಲಿಗೆ ಯಾರಿಗೇ ಆಗಲಿ ಮಿಷನ್ನಿನ ಕೆಲಸ ಮಾಡಲು ಅಥವಾ ಮಿಷನ್ನಿನಲ್ಲಿ ಸೇವೆ ಸಲ್ಲಿಸಲು ಯಾವುದೇ ಸ್ಥಾನ ಅಥವಾ ಹುದ್ದೆಯ ಅವಶ್ಯಕತೆ ಇಲ್ಲ, ಎರಡನೆಯದು ಐಕ್ಯತೆ ಮತ್ತು ಹೊಂದಾಣಿಕೆ ಈ ಕ್ಷಣದ ತುರ್ತು ಅವಶ್ಯಕತೆ ಆಗಿದ್ದು, ಇದನ್ನು ಎಂಥಹ ಕಠಿಣ ಸಂದರ್ಭದಲ್ಲೂ ಎಲ್ಲಾ ಸಮಯದಲ್ಲೂ ಸಹೋದರ ಸಹೋದರಿಯರೆಲ್ಲಾ ಕಾಪಾಡಿಕೊಳ್ಳಬೇಕು ಎಂಬುದು. ಸೋ.ಕಮಲೇಶ್‌ರವರು, ಈ ಭಂಡಾರದಲ್ಲಿ ಇಪ್ಪತ್ತೊಂದು ಸಾವಿರ ಅಭ್ಯಾಸಿಗಳು ಪಾಲ್ಗೊಂಡಿದ್ದಾರೆ ಎಂಬುದನ್ನು ಗುರುಗಳಿಗೆ ತಿಳಿಸಿದಾಗ "ಅವರು ಕೇವಲ ಎರಡೇ ದಿನದ ಸೂಚನೆಗೆ ಇಷ್ಟೊಂದು ಜನ ಬಂದಿದ್ದಾರೆ... ಇವರೆಲ್ಲ ನನ್ನ ಜನ" ಎಂದು ಉದ್ಗರಿಸಿದರು ಎಂದರು.

ಸಂಜೆಯ ಸತ್ಸಂಗದ ನಂತರ ಅಭ್ಯಾಸಿಗಳು ಹೊರಡಲಾರಂಭಿಸಿದರು. ಆಶ್ರಮದ ಹೊರಗೆ ಸಂಚಾರ ದಟ್ಟಣೆಯನ್ನು ನಿಯಂತ್ರಿಸುವುದು ಸಾಹಸದ ಕೆಲಸವಾಯಿತು. ಶ್ರದ್ಧೆಯುಳ್ಳ ಅಭ್ಯಾಸಿಗಳೆಲ್ಲರ ಸದ್ಯದ ಮನಸ್ಥಿತಿ ಎಂದರೆ ಸದ್ಯ ಗುರುಗಳು ತಾವು ತಮ್ಮ ಕರ್ತವ್ಯದಿಂದ ನಿವೃತ್ತರಾಗುವ ಆಲೋಚನೆಯನ್ನು ಬಿಟ್ಟು ಜವಾಬ್ದಾರಿಗಳ ಹೊರೆಯನ್ನು ಹೊತ್ತು ಮುಂದುವರೆಯಲು ಪ್ರೇಮ ಪೂರ್ವಕವಾಗಿ ಸಮ್ಮತಿಸಿದ್ದರಿಂದ ಉಂಟಾದ ನಿರಾಳ ಭಾವ. ಇದೇ ಸಮಯದಲ್ಲಿ ಗುರುಗಳು ತಮ್ಮ ಹೆಗಲ ಮೇಲಿದ್ದ ಆಡಳಿತದ ಹೊರೆಯನ್ನು ಹಗುರಗೊಳಿಸಿಕೊಳ್ಳುವ ಸಲುವಾಗಿ ತಮ್ಮ ನಾಮ ನಿರ್ದೇಶಿತ ಉತ್ತರಾಧಿಕಾರಿಗೆ ಬಹಳಷ್ಟು ಜವಾಬ್ದಾರಿಯನ್ನು ವರ್ಗಾಯಿಸುವ ಪ್ರಮುಖ ನಿರ್ಧಾರ ಕೈಗೊಂಡರು.

ಪ್ರಿಯತಮನ ಧ್ಯಾನವು ಪ್ರೇಮಿಯನ್ನು ಅವನ ಹತ್ತಿರಕ್ಕೆ ಎಳೆದೊಯ್ಯುವುದು. ಈ ಸಾಮೀಪ್ಯಕ್ಕೆ ಮೇರೆಯಿಲ್ಲ. ಪ್ರೇಮವು ಹೆಚ್ಚಿದಂತೆ ಅವನ ಕಡೆಗೆ ಮುಂದುವರೆಯುವೆವು. ಈ ಸಂಬಂಧವನ್ನ ನಾವು ಹುಟ್ಟುತ್ತಲೇ ನಮ್ಮ ಜೊತೆಗೆ ತಂದಿದ್ದೇವೆ. ಇದನ್ನು ಬೆಳೆಸುವುದು ನಮ್ಮ ಕರ್ತವ್ಯವಾಗಿದೆ. ನಾವು ಯಾವಾಗಲೂ ಆತನಿಗೆ ತೀರ ಸಮೀಪವೆನಿಸುವಷ್ಟು ಮಟ್ಟಿಗೆ ಇದನ್ನು ಬೆಳೆಸಬೇಕು.



'ಶ್ರೀ ರಾಮಚಂದ್ರರ ಸಮಗ್ರ ಕೃತಿಗಳು' ಸಂಪುಟ 1– ಪುಟ 179ರಿಂದ ತೆಗೆದುಕೊಳ್ಳಲಾಗಿದೆ.

## ಗುರುಗಳ ವರದಿ

### ಗುರುವಾರ ಜೂನ್ 21, 2012

ಗುರುಗಳು ಗಾಯತ್ರಿಯಲ್ಲಿದ್ದು ತಮ್ಮ ಜನ್ಮದಿನೋತ್ಸವವನ್ನು ತಿರುಪ್ಪೂರಿನಲ್ಲಿ ನಡೆಸಲು ನಿರ್ಧರಿಸಿದರು. ಇದು ಅವಶ್ಯವಾಗಿ ಶುಭ ಸಮಾಚಾರವಾಗಿತ್ತು. ಗುರುಗಳ ಬಾಬೂಜಿಯವರಿಂದ ಸ್ವೀಕರಿಸಿದ ಎರಡು ಸಂದೇಶಗಳಲ್ಲಿ ಇಂಥಹ ಉತ್ಸವಗಳಲ್ಲಿ ಎಲ್ಲರೂ ಪಾಲ್ಗೊಳ್ಳಬೇಕಾದ ಪ್ರಾಮುಖ್ಯತೆಯ ಬಗ್ಗೆ ಒತ್ತು ನೀಡಲಾಗಿದ್ದು ಮತ್ತು ಪ್ರತೀ ವರ್ಷವೂ ಇವು ನಡೆಯುತ್ತಿರಬೇಕು ಎಂದು ಬಾಬೂಜಿಯವರು ಹೇಳಿದ್ದರು. ಗುರುಗಳು ಈ ಸಂದೇಶಗಳನ್ನು ಓದಿದ ನಂತರ ಜನ್ಮದಿನೋತ್ಸವ ನಡೆಸಲು ನಿರ್ಧರಿಸಿ ಅದು ತಿರುಪ್ಪೂರಿನಲ್ಲಿ ಆಗಲಿ ಎಂದು ಹೇಳಿದರು. ಅವರ ಮುಖ್ಯ ಕಾಳಜಿ ಇದ್ದದ್ದು ಅಭ್ಯಾಸಿಗಳು ತಾವು ಕಷ್ಟ ಪಟ್ಟು ಸಂಪಾದಿಸಿದ ಹಣವನ್ನು ಉತ್ಸವದ ಪ್ರಯಾಣದ ಖರ್ಚಿಗೇ ಬಳಸುವ ಸಂದರ್ಭವಿದ್ದು, ಉತ್ಸವಕ್ಕೆ ನಿಗದಿತ ನೋಂದಣಿ ಶುಲ್ಕವಿರದೆ ಸ್ವಇಚ್ಛೆಯಿಂದ ಹಣ ದೇಣಿಗೆ ನೀಡುವವರು ನೀಡಲಿ ಎಂಬುದಾಗಿತ್ತು.

### ಶುಕ್ರವಾರ ಜೂನ್ 22, 2012

ಗುರುಗಳು ಆಶ್ರಮಕ್ಕೆ ಬಂದು ಆಂಧ್ರಪ್ರದೇಶದ ವಿವಿಧ ಭಾಗಗಳಿಂದ ಹಾಗೂ ವಿಶಾಖ ಪಟ್ಟಣದಿಂದ ಬಂದಿದ್ದ ಅಭ್ಯಾಸಿಗಳನ್ನು ಕಾಣಲು ಡಾರ್ಮ್ ಎ ಗೆ ಹೋದರು. ಡಾರ್ಮ್ ಸಂಪೂರ್ಣ ತುಂಬಿದ್ದು ಜನಭರಿತವಾಗಿತ್ತು. ಅಲ್ಲಿನ ಪ್ರತಿಯೊಬ್ಬರೂ ಗುರುಗಳನ್ನು ಕಾಣಬೇಕೆನ್ನುವ ಒತ್ತಡದಲ್ಲಿದ್ದರು. ಗುರುಗಳು ಸತ್ಸಂಗವನ್ನು ನಡೆಸಿ 'ಮೂಢ ಭಕ್ತಿ'ಯ ಬಗ್ಗೆ ಭಾಷಣ ಮಾಡಿದರು. ಇದೊಂದು ಮುಖ್ಯ ಸಮಸ್ಯೆಯಾಗಿದ್ದು ಇದರ ಜಾಲದಲ್ಲಿ ಬೀಳಬಾರದು. ಇದರ ಬದಲು ಸಹಜಮಾರ್ಗದಲ್ಲಿ ನಿಗದಿ ಪಡಿಸಿರುವ ಅಭ್ಯಾಸ ಮಾಡಿ ಲಭಿಸಬಹುದಾದ ಉಪಯೋಗಗಳನ್ನು ಕಾಣಬೇಕು. ಸಾಧನೆಯಲ್ಲಿ ನಿಜವಾದ ಪ್ರಗತಿಗಾಗಿ ಹಳೆಯ ಸಂಪ್ರದಾಯ ಮತ್ತು ಪೂಜಾವಿಧಾನಗಳನ್ನು ತ್ಯಜಿಸಬೇಕಾಗುತ್ತದೆ. ಗುರುಗಳು ಆ ಗುಂಪಿನೊಳಗಿಂದ ಸಾವಕಾಶವಾಗಿ ತಮ್ಮ ಕುಟೀರಕ್ಕೆ ತೆರಳಿದರು.

ಗುರುಗಳು ವೃದ್ಧ ಸೋದರಿಯೊಬ್ಬರಿಗೆ ಉಡುಗೊರೆಯಾಗಿ ನೀಡಲು ಗಾಲಿ ಕುರ್ಚಿಯೊಂದನ್ನು ತರಿಸಿದ್ದು ಸಂಜೆ ಆಶ್ರಮದಲ್ಲಿ ಆ ಸೋದರಿಯಿದ್ದಲ್ಲಿಗೆ ತೆರಳಿ ಅದನ್ನು ನೀಡಿದರು. ಈ ಸನ್ನಿವೇಶವು ರಮಣೀಯವಾಗಿದ್ದು ಗುರುಗಳು ಚೆನ್ನಾಗಿ ಬಲ್ಲ ತಮ್ಮ ವೃದ್ಧ ಸೋದರಿಯೆಡೆಗಿನ ಪ್ರೇಮವನ್ನು ಯಾರೂ





ಕಾಣಬಹುದಾಗಿತ್ತು. ನಂತರ ಗುರುಗಳು ಕ್ಯಾಂಟೀನ್ ಬಳಿ ನಿಂತಾಗ ಅವರಿಗಾಗಿ ಕೆಲ ತಿನಿಸುಗಳು ಬರಲಾಗಿ ಅವರೂ ತಿಂದು ತಮ್ಮ ಸುತ್ತಲಿದ್ದವರಿಗೂ ಹಂಚಿದರು. ನಂತರ ಗುರುಗಳು ಕುಟೀರಕ್ಕೆ ಹಿಂದಿರುಗಿ ತಮ್ಮ ಕೆಲಸದಲ್ಲಿ ಮಗ್ನರಾದರು.

### ಶನಿವಾರ ಜೂನ್ 23, 2012

ಸುಮಾರು 150ರಿಂದ 20 ಅಭ್ಯಾಸಿಗಳು ತಿರುಪ್ಪೂರಿನಿಂದ ಬಂದಿದ್ದು ಅವರಲ್ಲಿ ಕೆಲವರೊಡನೆ ಗುರುಗಳು ತಮ್ಮ ಶಯನಗೃಹದಲ್ಲಿ ಮಾತನಾಡುತ್ತಿದ್ದರು. ನಂತರ ಗುರುಗಳು ಎಲ್ಲರನ್ನೂ ಭೇಟಿಯಾಗಿ ಉಪಾಹಾರದ ನಂತರ ಎಲ್ಲರನ್ನೂ ಮತ್ತೊಮ್ಮೆ ಭೇಟಿಯಾಗುವುದಾಗಿ ತಿಳಿಸಿ ಅಲ್ಲಿದ್ದ ಎಲ್ಲರಿಗೂ ಪ್ರಸಾದ ಹಂಚಿದರು. ಉಪಾಹಾರದ ನಂತರ ಗುರುಗಳು ಹಜಾರಕ್ಕೆ ಬಂದರು ಅಭ್ಯಾಸಿಗಳೆಲ್ಲರೂ ಅವರ ಸುತ್ತ ಕುಳಿತರು. ಗುರುಗಳು ಪ್ರಶ್ನೆಗಳಿದ್ದರೆ ಕೇಳಿ ಎಂದು ಎರಡು ಬಾರಿ ಹೇಳಿದರು, ಏಕೆಂದರೆ ಉತ್ಸವಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಶ್ನೆ ಅಥವಾ ಅನುಮಾನಗಳಿರಬಾರದೆಂಬುದು ಅವರ ಉದ್ದೇಶವಾಗಿತ್ತು.

ಒಬ್ಬ ಅಭ್ಯಾಸಿಯು ಗುರುಗಳಿಗೆ "ಕೆಲಸ ಎದುರಾದಾಗ ನಾನು ಉದ್ವೇಗಗೊಳಗಾಗಿ ನಿಯಂತ್ರಣ ಕಳೆದುಕೊಳ್ಳುತ್ತೇನೆ" ಎನ್ನಲು, ಅವರು ನೀವು ಯಾವುದೇ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗಿ ಬಂದಾಗ ಒಂದು ಹೆಜ್ಜೆ ಹಿಂದೆ ಹೋಗಿ ಆಳವಾಗಿ ಉಸಿರೆಳೆದುಕೊಳ್ಳಿ, ನಂತರ ಆಕಾಶದೆಡೆ ನೋಡಿ ನಂತರ ನಿರ್ಧರಿಸಿ, ಯಾವುದಕ್ಕೂ ಒಂದು ಅಲ್ಪ ವಿರಾಮ ನೀಡಿ ಮುಂದುವರೆಯಬೇಕು ಎಂದು ತಾವೇ ಆಳವಾದ ಉಸಿರು ತೆಗೆದುಕೊಂಡು ಆಕಾಶ ನೋಡಿ ತೋರಿಸಿದರು. ನಂತರ ಅವರು "ಕೆಲಸ ಬಲು ಆಕರ್ಷಕವಾಗಿರುತ್ತದೆ, ಆದರೆ ನಾವು ಎಚ್ಚರಿಕೆಯಿಂದಿರಬೇಕು" ಎಂದರು.

### ಭಾನುವಾರ ಜೂನ್ 24, 2012

ಗುರುಗಳು ಸೋ.ಕಮಲೇಶರನ್ನು ಸತ್ಸಂಗದಲ್ಲಿ ತಮ್ಮ ಬಳಿ ಆಸೀನರಾಗಲು ಹೇಳಿದರು. ಸತ್ಸಂಗ ಒಂದು ತಾಸಿನಷ್ಟಿದ್ದು ಸತ್ಸಂಗದ ನಂತರ ಸೋ.ಕಮಲೇಶರು ಅಸ್ವಸ್ಥರಾದರು. ಹೀಗೆ ಅವರು ಒಂದು ವಾರದಷ್ಟು ಕಾಲ ವೈರಾಣು ಸೋಂಕಿನ ಕಾರಣ ಕಾಯಿಲೆಯಿಂದಿದ್ದರು.

### 25–29 ಜೂನ್ 2012

ಈ ವಾರದ ಬಹಳ ಸಮಯ ಗುರುಗಳು ಸ್ವಸ್ಥರಿರಲಿಲ್ಲ. ಅವರು ಬಹುತೇಕ ವಿಶ್ರಾಂತಿ ಪಡೆಯುತ್ತಿದ್ದು ಅಭ್ಯಾಸಿಗಳನ್ನು ಭೇಟಿಯಾಗುತ್ತಿರಲಿಲ್ಲ.

ಶುಕ್ರವಾರದ ರಾತ್ರಿ ಊಟದ ನಂತರ ಗುರುಗಳು ಒಬ್ಬರೇ ಕುಳಿತು ಶೋಭಾ ಗುರ್ತು ಅವರು ಹಾಡಿರುವ 'ಮಾರೊ ಪ್ರಣಾಮ್' ಅನ್ನು ಕೇಳುತ್ತಿದ್ದರು. ಗುರುಗಳು ಈ ಹಾಡಿನಲ್ಲಿ ತಲ್ಲೀನರಾಗಿ ಹೋಗಿದ್ದರು. ನೀರವ ಮೌನದಲ್ಲಿ ಕುಳಿತು ಅತ್ಯಂತ ತನ್ಮಯತೆಯಿಂದ ಅವರು ಹಾಡನ್ನು ಕೇಳುತ್ತಿದ್ದುದು ಅಲ್ಲಿದ್ದ ಎಲ್ಲರಿಗೂ ಅದ್ಭುತ ಅನುಭವವಾಗಿತ್ತು.

### ಭಾನುವಾರ ಜುಲೈ 1 2012

ಗುರುಗಳು ಭಾನುವಾರದ ಸತ್ಸಂಗವನ್ನು ನಡೆಸಿಕೊಡಲು ಬೇಗನೆ ಎದ್ದು ತಯಾರಿದ್ದರು. ಸತ್ಸಂಗದ ನಂತರ ಉಪಾಹಾರ ಸೇವಿಸಿ ಸೋ.ಆದಿತ್ಯ ಮತ್ತು ಅವರ ತಾಯಿ ಸೋ.ಸುಜಾತ ರೊಡನೆ ದೀರ್ಘವಾದ ಮಾತುಕತೆಯಲ್ಲಿ ತೊಡಗಿದ್ದರು. ಆದಿತ್ಯರವರು ಗುರುಗಳ ಸಹೋದರನ ಮೊಮ್ಮಗ. ಅವರು ಭಾರತಕ್ಕೆ ತಮ್ಮ ಕುಟುಂಬದ ಒಂದು ಮದುವೆಗಾಗಿ ಬಂದಿದ್ದು, ಗುರುಗಳನ್ನು ಭೇಟಿ ಮಾಡಲು ಬಂದಿದ್ದರು. ಗುರುಗಳು ಆದಿತ್ಯನೆಡೆಗೆ ವಿಶೇಷ ಗಮನ ಕೊಟ್ಟು ಮಾತನಾಡಿಸುತ್ತಿದ್ದರು.

ಗುರುಗಳು ಬೆಳಗಿನ ಸತ್ಸಂಗದ ಬಗ್ಗೆ ಮಾತನಾಡುತ್ತಿದ್ದರು. ಒಬ್ಬ ಅಭ್ಯಾಸಿ ಅದು 1 ತಾಸು 5 ನಿಮಿಷದಷ್ಟಿತ್ತು ಎನ್ನಲು ಗುರುಗಳು ಸರಿಯಾಗಿ ಹೇಳಬೇಕೆಂದರೆ ಅದು 1 ತಾಸು 7 ನಿಮಿಷ ಇತ್ತು. ಅದು ವಿಶೇಷವಾದ ಸತ್ಸಂಗವಾಗಿದ್ದು ತಾವು ಯಾವುದೋ ಬೇರೆ ಸೌರವ್ಯೂಹದಲ್ಲಿ ಕಪ್ಪು ರಂಧ್ರದೊಳಗೆ ಸೆಳೆದು ಹೋಗುತ್ತಿದ್ದ ಅನುಭವವಾಗುತ್ತಿತ್ತು ಎಂದರು.

ಮಾತುಕತೆಯ ನಂತರ ಹೊಸೂರಿನ ಅಭ್ಯಾಸಿಗಳನ್ನು ಭೇಟಿಯಾದ ಗುರುಗಳು ಅವರಿಗೆ ವಸತಿ ಉದ್ದೇಶದ ಹಕ್ಕು ಪತ್ರಗಳನ್ನು ವಿತರಿಸಿದರು. ಒಟ್ಟು 60 ಅಭ್ಯಾಸಿಗಳಿದ್ದು ಎಲ್ಲರಿಗೂ ಹಂಚುವಲ್ಲಿ ಗುರುಗಳಿಗೆ ಆಯಾಸವಾಗಿತ್ತು. ಇದರ ನಂತರ ವಿಶ್ರಾಂತಿಗಾಗಿ ತೆರಳಿದ ಅವರು ಸಂಜೆ 7ಕ್ಕೆ ಎದ್ದರು. ಅವರು ಸಿದ್ಧರಾದ ನಂತರ ಕೊಲ್ಕತ್ತಾದಿಂದ ಆಗತಾನೆ ಬಂದಿದ್ದ ದೊಡ್ಡ ಸಂಖ್ಯೆಯ ಅಭ್ಯಾಸಿಗಳನ್ನು ಭೇಟಿಯಾದರು. ಭೇಟಿಯು ಗುರುಗಳ ಮಲಗುವ ಕೋಣೆಯಲ್ಲಿ ನಡೆದು ಅಲ್ಲಿ ಸಂಪೂರ್ಣ ಮೌನದ ವಾತಾವರಣವಿತ್ತು. ಯಾರೂ ಮಾತನಾಡದೆ, ಗುರುಗಳ ಪ್ರೇಮವನ್ನು ಆ ಮೌನದಲ್ಲಿಯೇ ಎಲ್ಲರೂ ಅನುಭವಿಸುತ್ತಿದ್ದರು.



ಗುರುಗಳು ದೂರದರ್ಶನದಲ್ಲಿ ಆಶ್ರಮ ನಿರ್ಮಾಣಕ್ಕೆ ಸಂಬಂಧಿಸಿದ ಯಾವುದೋ ಪ್ರಸ್ತುತಿಯನ್ನು ನೋಡಿ ನಂತರ ಅಭ್ಯಾಸಿಯೊಬ್ಬರ ನೃತ್ಯದ ರಂಗ ಪ್ರವೇಶವನ್ನು ನೇರಪ್ರಸಾರದಲ್ಲಿ ವೀಕ್ಷಿಸಿದರು.

ಮಂಗಳವಾರ ಜುಲೈ 3 ಗುರುಪೂರ್ಣಿಮೆಯಾಗಿತ್ತು. ಈ ಶುಭ ದಿನದಂದು ಗುರುಗಳ ಆಶೀರ್ವಾದ ಪಡೆಯಲು ಬಹಳಷ್ಟು ಅಭ್ಯಾಸಿಗಳು ಅವರ ಕುಟೀರದ ಮುಂದೆ ಕಾದಿದ್ದರು. ಗುರುಗಳು ಎಲ್ಲರನ್ನೂ ಭೇಟಿಯಾಗಿ ಆಶೀರ್ವದಿಸಿದರು. ಅವರು 'ನಾನು ನನ್ನ ಗುರುಗಳನ್ನು ಭೇಟಿ ಮಾಡಲು ಹೋದಾಗ ನನಗೆ ಗುರು ಪೂರ್ಣಿಮೆಯ ಬಗ್ಗೆ ಏನೂ ತಿಳಿದಿರಲಿಲ್ಲ. ಆಗ ನನಗೆ ನಲವತ್ತು ವಯಸ್ಸು. ಅವರು ನನಗೆ ನಲವತ್ತು ಪಟ್ಟು ಹೆಚ್ಚಿನ ಪ್ರಗತಿ ಉಂಟಾಗಲೆಂದು ಹಾರೈಸಿದ್ದರು. ನಾನು ಹಾಗೆಯೇ ಹಾರೈಸುತ್ತೇನೆ' ಎಂದರು.

ಬೆಳಗಿನ ಒಂದು ತಾಸು ಅವಧಿಯ ಸತ್ಸಂಗದ ನಂತರ ಗುರುಗಳು ಒಂಭತ್ತು ವಿವಾಹಗಳನ್ನು ನೆರವೇರಿಸಿದರು. ಕೆಲ ಭಜನೆಗಳನ್ನು ಕೇಳಿ ಅವರ ಕೋಣೆಗೆ ಮರಳಿದರು. ಎಲ್ಲರೂ ಗುರುಗಳನ್ನು ಕಾಣಲು ಬಯಸುತ್ತಿದ್ದುದರಿಂದ ಬಹಳ ಒತ್ತಡವಿತ್ತು. ಆದರೆ ಗುರುಗಳು ಬಹಳ ಆಯಾಸಗೊಂಡಿದ್ದರಿಂದ ವಿಶ್ರಾಂತಿಗೆ ತೆರಳಿದರು.

## ಭಾನುವಾರ ಜುಲೈ 8 2012

ಈ ವಾರದ ಬಹಳ ಭಾಗ ಗುರುಗಳು ಅಸ್ವಸ್ಥರಿದ್ದರು. ಅವರು 9 ರಂದು ಗಾಯತ್ರಿಗೆ ಹೋಗಿ ವಾರಾಂತ್ಯದಲ್ಲಿ ಆಶ್ರಮಕ್ಕೆ ಹಿಂದಿರುಗುವ ಆಲೋಚನೆಯಲ್ಲಿದ್ದರು. ಗುರುಗಳು ಗಾಯತ್ರಿಯಲ್ಲಿ ಆಹ್ಲಾದಕರ ಮನಸ್ಥಿತಿಯಲ್ಲಿದರೂ ಅವರ ಆರೋಗ್ಯ ಪ್ರತೀದಿನ ಏರುಪೇರಾಗುತ್ತಿತ್ತು. ಅವರ ಆರೋಗ್ಯದಲ್ಲಿ ತ್ವರಿತ ಬದಲಾವಣೆ ಆಗುತ್ತಿದ್ದುದು ಬಹಳ ನೋವಿನ ಸಂಗತಿಯಾಗಿತ್ತು. ಕಳೆದ ರಾತ್ರಿ ಅವರು ತೀರಾ ಅಸೌಖ್ಯ ಅನುಭವಿಸಿ ಬೇಗನೆ ಮಲಗಿದ್ದರು. ಬೆಳಗ್ಗೆ ಅವರು ಅತ್ಯಂತ ಸಂತೋಷದಿಂದಿದ್ದು ಆಶ್ಚರ್ಯಕರವಾಗಿತ್ತು. ಅವರು ತಿರುಪ್ಪೂರಿನ ಉತ್ಸವ ಮಂಡಳಿಗೆ ಸಂದೇಶ ಕಳಿಸಿ ಅಲ್ಲಿನ ಕೆಲಸದ ಪ್ರಗತಿಯ ಬಗ್ಗೆ ವಿಚಾರಿಸಿದರು. ಕೆಲಸದ ತೀವ್ರ ಪ್ರಗತಿಯ ಬಗ್ಗೆ ಹೇಳುತ್ತಾ, ಪ್ರೇಮ ಪೂರ್ವಕವಾಗಿ ಮಾಡಿದಾಗ ನಿಸರ್ಗವು ಸಹಕಾರ ನೀಡುತ್ತದೆ.ಅದರಲ್ಲೇನೂ ಆಶ್ಚರ್ಯವಿಲ್ಲ' ಎಂದರು. ನನಗೆ ತಾಯಿಯು ತನ್ನ ಗರ್ಭದೊಳಗೆ ತನ್ನೆಲ್ಲಾ ನೋವು, ದೈಹಿಕ ವೇದನೆಗಳನ್ನು ಸಹಿಸುತ್ತಾ, ತನ್ನ ಹುಟ್ಟುವ ಮಗುವಿನ ಭವಿಷ್ಯದ ಬಗ್ಗೆ ಬಂಗಾರದಂತಹ ಭರವಸೆಗಳನ್ನು ಹೊಂದಿ ಕೇವಲ ಪ್ರೇಮಮಾತ್ರ ಹರಿಸುತ್ತಾಳೋ, ಅಂತಹ ಪ್ರೇಮ ನಮ್ಮೆಲ್ಲಾ ಅಭ್ಯಾಸಿಗಳನ್ನು ಹರಸಲಿ ಎಂದರು. ಗುರುಗಳು ನಂತರ ತಾಯಿಯ ಬಗ್ಗೆ ಹೇಳುತ್ತಾ ' ಜೀವ ವೃಕ್ಷ' ಎಂದರು.ಅವರು ಮರದ ಚಿತ್ರ ಸಹ ಬರೆದು ಈ ಸಂದೇಶವನ್ನು ವ್ಯಕ್ತಪಡಿಸಿದರು.

ಗುರುಗಳು ಜುಲೈ 14 ಶನಿವಾರದಂದು ಆಶ್ರಮಕ್ಕೆ ಹಿಂದಿರುಗಿದರು. ಮತ್ತು ಅವರ ಆರೋಗ್ಯವು ಸ್ವಲ್ಪವೂ ಸರಿ ಇರಲಿಲ್ಲ. ಅವರಿಗೆ 15ರಂದು ಬಹಳ ಅನಾರೋಗ್ಯವಾಗಿ ಅವರು ತಮ್ಮ ಜನ್ಮದಿನೋತ್ಸಕ್ಕೆ ತಿರುಪ್ಪೂರಿಗೆ ಹೊರಡುವ ಕಾರ್ಯಕ್ರಮವನ್ನು ರದ್ದುಗೊಳಿಸಿದರು.

ಗುರುಗಳು ಹೊಸದಾಗಿ ನಿರ್ಮಿಸಿದ್ದ ಮಾಧ್ಯಮ ಕೊಠಡಿಯನ್ನು 16ರಂದು ಉದ್ಘಾಟಿಸಬೇಕಾಗಿತ್ತು. ಆದರೆ ಅವರ ಅನಾರೋಗ್ಯದಿಂದಾಗಿ ಸೋ.ಕಮಲೇಶರು ಉದ್ಘಾಟಿಸಿದರು. ಮಾಧ್ಯಮ ಕೊಠಡಿಯು ಆಧುನಿಕ ತಂತ್ರಾಜ್ಞಾನದ ಈ ಕೊಠಡಿ ಸಂಪೂರ್ಣ ಶಬ್ದನಿರೋಧಕವಾಗಿದ್ದು ಕಂಪ್ಯೂಟರ್ ಸರ್ವರ್ ಹೊಂದಿದ್ದು ಇಲ್ಲಿ ಉತ್ತಮ ಮಟ್ಟದ ಧ್ವನಿ ಮುದ್ರಣ ಮಾಡಬಹುದಾಗಿದೆ.

ಗುರುಗಳ ಅನಾರೋಗ್ಯ ಮೂರು ವಾರಗಳವರೆಗೆ ಹಾಗೇ ಮುಂದುವರೆದು ಈಗ ನಿಧಾನವಾಗಿ ಚೇತರಿಸಿಕೊಳ್ಳುತ್ತಿದ್ದರು. ಆಶ್ರಮವು ಅಭ್ಯಾಸಿಗಳಿಗೆ ಜುಲೈ ಅಂತ್ಯದವರೆಗೆ ಮುಚ್ಚಲ್ಪಟ್ಟಿತ್ತು. ತಿರುಪ್ಪೂರಿನ ಉತ್ಸವದ ನಂತರ ಮಣಪ್ಪಾಕ್ಕಂಗೆ ಬರಲು ಯೋಜಿಸಿದ್ದ ಅಭ್ಯಾಸಿಗಳಿಗೆ ಬದಲೀ ವ್ಯವಸ್ಥೆಯನ್ನು ಮಾಡಿಕೊಳ್ಳಲು ಸೂಚಿಸಲಾಯಿತು. ಗುರುಗಳ ಆರೋಗ್ಯದ ಬಗ್ಗೆ ಅವರನ್ನು ಉಪಚರಿಸುತ್ತಿದ್ದ ವೈದ್ಯರುಗಳು ಕಾಲಕಾಲಕ್ಕೆ ವರದಿ ನೀಡಿ ಅವರ ನಿಧಾನಗತಿಯ ಚೇತರಿಕೆ ಬಗ್ಗೆ ಅಭ್ಯಾಸಿಗಳೆಲ್ಲರಿಗೂ ಮಾಹಿತಿ ಲಭ್ಯವಾಗುವಂತೆ ನೋಡಿಕೊಂಡರು. ಪೂಜ್ಯ ಗುರುಗಳು ಶೀಘ್ರವಾಗಿ ಗುಣಮುಖರಾಗಿ ಉತ್ತಮ ಆರೋಗ್ಯ ಮತ್ತು ದೀರ್ಘಾಯುಷ್ಯ ಹೊಂದುವಂತೆ ಪ್ರಾರ್ಥಿಸಲು ನಾವು ಎಲ್ಲಾ ಸಹೋದರ ಸಹೋದರಿಯರಲ್ಲಿ ಕೇಳಿಕೊಳ್ಳುತ್ತೇವೆ.







# ಹೊಸ ಪ್ರಕಟನೆಗಳು

ತಿರುಪ್ಪೂರಿನಲ್ಲಿ ನಡೆದ ಗುರುಗಳ 86ನೇ ಹುಟ್ಟುಹಬ್ಬದ ಶುಭಸಂದರ್ಭದಂದು ಇಪ್ಪತ್ತು ಪುಸ್ತಕಗಳು ಮತ್ತು ಎಂಟು ಆಡಿಯೊ-ವಿಡಿಯೋ ಸಿಡಿಗಳನ್ನು ಬಿಡುಗಡೆಗೊಳಿಸಲಾಯಿತು. ವಿಶೇಷ ಭಾವಚಿತ್ರಗಳನ್ನು ಗಾಜು, ಕ್ಯಾನ್‌ವಾಸ್ ಮತ್ತು ಬೆಳ್ಳಿಯ ತಗಡಿನ ಮೇಲಿನ ಕೆತ್ತನೆಯ ಮೂಲಕ ಹೊರತರಲಾಗಿದೆ. ಇವುಗಳು ಮುಂಗಡವಾಗಿ ಕಾಯ್ದಿರಿಸುವುದರಿಂದ ಮಾತ್ರ ಲಭ್ಯವಿದ್ದು, ಬುಕಿಂಗ್ ತೆರೆದಿದೆ. ಆಸಕ್ತಿಯುಳ್ಳ ಅಭ್ಯಾಸಿಗಳು july24.photos@gmail.comನ್ನು ಸಂಪರ್ಕಿಸಬಹುದು. ವಿವಿಧ ರೀತಿಯ,ದರಗಳ ನೂರಾರು ಇತರ ಭಾವಚಿತ್ರಗಳನ್ನೂ ಪ್ರದರ್ಶನದಲ್ಲಿ ಇಡಲಾಗಿತ್ತು.

## ಆಡಿಯೋ-ವಿಡಿಯೋ ಬಿಡುಗಡೆಗಳು

ವ್ಹಿಸ್ಪರ್ಸ್
ಫ್ರೆಂಚ್ ಎಂಪಿ3





ಹಿ, ಹುಕ್ಕಾ ಆಂಡ್ ಐ-
ಆಂಗ್ಲ ಡಿವಿಡಿ




ಸಹಜಮಾರ್ಗ ಮೀಂಡರಿಂಗ್ಸ್- ಆಂಗ್ಲ ಡಿವಿಡಿ




ಪ್ರಶಿಕ್ಷಕರಿಗಾಗಿ ಗುರುಗಳ ಉಪನ್ಯಾಸಗಳು – ಭಾಗ1 ಮತ್ತು 2- ಆಂಗ್ಲ ಎಂಪಿ3




ಚೆನ್ನೈ ಮತ್ತು ಕೊಯಮತ್ತೂರಿನಲ್ಲಿ ಗುರುಗಳು ನೀಡಿದ ಉಪನ್ಯಾಸಗಳು- ತಮಿಳು




ದಿ ಇಟರ್ನಲ್ ಪವರ್ ಆಫ್ ಲವ್-
ಆಂಗ್ಲ ಡಿವಿಡಿ




ಮಾಸ್ಟರ್ಸ್ ಚಾಯ್ಸ್ –ಭಾಗ4
ಎಂಪಿ3





ಇನ್ನರ್ ರಿಫ್ಲೆಕ್ಷನ್ಸ್- ಭಾಗ2 ಆಂಗ್ಲ
ಎಂಪಿ3





## ಹೊಸ ಪುಸ್ತಕಗಳು

ಹಿ, ಹುಕ್ಕಾ ಆಂಡ್ ಐ- ಆಂಗ್ಲ





ಕಮೆಂಟರಿ ಆನ್ ಟೆನ್ ಮ್ಯಾಕ್ಸಿಮ್ಸ್
ಆಫ್ ಸಹಜ್‌ಮಾರ್ಗ್





ಅಭ್ಯಾಸಿ ದಿನಚರಿ




ಪ್ರಶಿಕ್ಷಕರ ಡೈರೆಕ್ಟರಿ




ಕಾಮಿಕ್ ಪುಸ್ತಕ- ಟಿಮೊತಿ





ಅಮರ ಸಂದೇಶಗಳು-2




ತಮಿಳು
ತೆಲುಗು
ಮರಾಠಿ
ಗುಜರಾತಿ
ಕನ್ನಡ
ಮಲಯಾಳಂ

ದ ಪ್ರಿನ್ಸಿಪಲ್ಸ್ ಆಫ್ ಸಹಜಮಾರ್ಗ –
ಭಾಗ 15




ದ ಪರ್ಸ್ಯೂಟ್ ಆಫ್ ದ
ಇನ್ನರ್ ವೇ



# ಗುರುಗಳ 86ನೇ ಜನ್ಮದಿನೋತ್ಸವ ಆಚರಣೆಗಳು

**ಅಸ್ಸಾಂ** – ದಿಬ್ರೂಗಢದ ಅಭ್ಯಾಸಿಗಳು ಬಲು ಉತ್ಸಾಹದಿಂದ ಈ ಶುಭದಿನವನ್ನು ಆಚರಿಸಿದರು. ಮಗುವೊಂದು 'ಹ್ಯಾಪಿ ಬರ್ತ್‌ಡೇ'ಯನ್ನು ನುಡಿಸಿದರೆ, ಸೋದರಿಯೊಬ್ಬರು ಭಜನೆಯನ್ನು ಹಾಡಿದರು. ಗುರುಗಳ ಎರಡು ಲಘು ಉಪನ್ಯಾಸಗಳ ನಂತರ ಉಪಹಾರ ಮತ್ತು ಪ್ರಸಾದದೊಂದಿಗೆ ಕಾರ್ಯಕ್ರಮವು ಮುಕ್ತಾಯಗೊಂಡಿತು.

**ಅಲಹಾಬಾದ್**– ಸತ್ಸಂಗದ ನಂತರ ಮಕ್ಕಳ ನೃತ್ಯ, ಸೋದರಿಯರು ಹಾಡಿದ ಗುರುಗಳ ಪ್ರಿಯ ಭಜನೆಗಳು ಮತ್ತು ಯುವಜನರು ಹಾಡಿದ ಹುಟ್ಟುಹಬ್ಬದ ಗೀತೆ ಇವು ದಿನದ ಪ್ರಮುಖ ಆಕರ್ಷಣೆಗಳಾಗಿದ್ದವು. ಗುರುಗಳಿಗೆ ಗೀತೆಯ ಮೂಲಕ ಅಭಿನಂದಿಸಲು ಸುಮಾರು 600 ಜನ ಜೊತೆಗೂಡಿದ್ದರು. ಧ್ಯಾನಮಂದಿರದ ಸುತ್ತಲೂ ಅಭ್ಯಾಸಿಗಳು ಬೇವಿನ ಸಸಿಗಳನ್ನು ನೆಟ್ಟರು. ಸೋ. ನಿಶಾ ಮತ್ತು ತಂಡದವರು ಪ್ರತಿಸ್ಪಂದನಯುತ ಕಾರ್ಯಕ್ರಮ ನಡೆಸಿಕೊಟ್ಟರು. ಸಂಜೆಯ ಸತ್ಸಂಗದೊಡನೆ ಕಾರ್ಯಕ್ರಮವು ಮುಕ್ತಾಯಗೊಂಡಿತು.

**ಲಖನೌ**– ಮೂರು ದಿನಗಳ ಉತ್ಸವದಲ್ಲಿ 200ಕ್ಕೂ ಅಧಿಕ ಅಭ್ಯಾಸಿಗಳು ಪಾಲ್ಗೊಂಡರು. ಜುಲೈ23ರಂದು ಮುಂಜಾನೆಯ ಸತ್ಸಂಗದ ನಂತರ ವೈಚಾರಿಕ ಉಪನ್ಯಾಸಗಳು ಮತ್ತು ಅಭ್ಯಾಸಿಗಳ ಅನುಭವ ಕಥನಗಳು ನಡೆದವು. 24ರಂದು ಭಾರೀ ಮಳೆಯಲ್ಲಿಯೂ 300 ಅಭ್ಯಾಸಿಗಳು ಆಶ್ರಮವನ್ನು ತಲುಪಿದರು. ಧ್ಯಾನದ ನಂತರ, ಮಕ್ಕಳ ಅಭಿನಯವು ಅಭ್ಯಾಸಿಗಳ ಹೃದಯ ತಟ್ಟಿತು. ಪ್ರತಿಸ್ಪಂದನ ನಾಟಕವು ಪ್ರೇಕ್ಷಕರಿಗೆ ಮೋಡಿಮಾಡಿತು.

**ಪಂಜಾಬ್ ಮತ್ತು ಹರಿಯಾಣ**– ಪಂಜಾಬ್ ಮತ್ತು ಹರಿಯಾಣದ ಅಭ್ಯಾಸಿಗಳು ಗುರುಗಳ ಜನ್ಮದಿನವನ್ನು ತಂತಮ್ಮ ಕೇಂದ್ರಗಳಲ್ಲಿ ಆಚರಿಸಿದರು. **ಸೋನಿಪತ್**ನಲ್ಲಿ ನಡೆದ ಮೂರು ದಿನದ ಕಾರ್ಯಕ್ರಮದಲ್ಲಿ ಸುಮಾರು ನೂರು ಜನ ಪಾಲ್ಗೊಂಡಿದ್ದರು. ಸತ್ಸಂಗಗಳೊಡನೆ ಗುರುಗಳ ಸಿಡಿ, ಲಾಲಾಜಿ ಮಹಾರಾಜರ ಜೀವನಾಧಾರಿತ ಸಿಡಿಗಳನ್ನು ಪ್ರದರ್ಶಿಸಲಾಯಿತು. **ಪಟಿಯಾಲ**ದಲ್ಲಿ ಮಕ್ಕಳಿಗಾಗಿ ಚಿತ್ರಕಲಾ ಮತ್ತು ಬರಹ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು ಹಾಗೂ ಮೂರು ದಿನಗಳೂ ಮೂರು ಸತ್ಸಂಗಗಳು ನಡೆದವು. **ಚಂಡೀಗಢ**ದಲ್ಲಿ ಸುಮಾರು 55 ಅಭ್ಯಾಸಿಗಳು ಭಾಗವಹಿಸಿದರು. ಸಂಜೆ ಗುರುಗಳ ಆರೋಗ್ಯದಲ್ಲಿ ಸುಧಾರಣೆಯಾದ ವಾರ್ತೆಯು ಎಲ್ಲರಲ್ಲೂ ಸಂತಸ ಉಕ್ಕಿಸಿತು.

**ಕೊಲ್ಕಾತಾ ಆಶ್ರಮ** – ಕೊಲ್ಕಾತಾದ 300 ಅಭ್ಯಾಸಿಗಳು ಮತ್ತು ಉಪಕೇಂದ್ರಗಳಾದ ಜಾರ್ಖಂಡ್, ಬಂದೇಲ್, ಶಾಂತಿಪುರ್ ಇತ್ಯಾದಿಗಳಿಂದ ಐವತ್ತು ಅಭ್ಯಾಸಿಗಳು 23ರಿಂದ 25ರವರೆಗಿನ ಉತ್ಸವದಲ್ಲಿ ಪಾಲ್ಗೊಂಡರು. 24ರಂದು ರಬೀಂದ್ರ ಸಂಗೀತ, ಭಜನೆಗಳು, ಗುರುಗಳ ಪ್ರವಾಸದ ಡಿವಿಡಿ, ಹಿರಿಯರ ಅನುಭವಗಳು, ಪದ್ಧತಿಯ ಸಾಧನೆಯ ಪ್ರಾಮುಖ್ಯತೆ ಮತ್ತು ಭಂಡಾರಗಳ ಪ್ರಾಮುಖ್ಯತೆ ಕುರಿತ ಉಪನ್ಯಾಸಗಳು ನಡೆದವು. ಉಪನ್ಯಾಸಗಳ ನಂತರ ಸಹಜಮಾರ್ಗ ಪದ್ಧತಿಯ ಬಗ್ಗೆ ಪ್ರತಿಸ್ಪಂದನ ಕಾರ್ಯಕ್ರಮವಿದ್ದಿತು.

ಭೋಜನದ ನಂತರ ಗುರುಗಳು ಹಿಂದಿ ಮತ್ತು ಆಂಗ್ಲಭಾಷೆಗಳಲ್ಲಿ ನೀಡಿದ ಉಪನ್ಯಾಸಗಳ ಡಿವಿಡಿ ತೋರಿಸಲಾಯಿತು ಮತ್ತು ಗುರುಗಳ 'ಡೌನ್ ಮೆಮೊರಿ ಲೇನ್'ನ ಪ್ರಸ್ತುತಿಯು ಎಲ್ಲರನ್ನೂ ಗುರುಗಳ ಸ್ಮೃತಿಯಲ್ಲಿ ತಲ್ಲೀನರಾಗುವಂತೆ ಮಾಡಿತು.

## ರಾಜಸ್ಥಾನ

**ಜೈಪುರ:** ಮೂರೂ ದಿಗಳಂದು ಬೆಳಿಗ್ಗೆ 7.30ಕ್ಕೆ ಮತ್ತು ಸಂಜೆ 5.00ಕ್ಕೆ ನಡೆಸಲಾಗಿ 280 ಅಭಾಸಿಗಳು ಮತ್ತು 65 ಮಕ್ಕಳು ಹಾಜರಿದ್ದರು. 24ರಂದು ಮಕ್ಕಳು ಹಾಡನ್ನು ಹಾಡಿದರು ಮತ್ತು ಸಾಂಸ್ಕೃತಿಕ ಚಟುವಟಿಕೆಯಲ್ಲಿ ಪಾಲ್ಗೊಂಡರು. ಸಹಜಮಾರ್ಗದ ವಿವಿಧ ಅಂಶಗಳ ಮೇಲೆ ಸೋ.ತರುಣ್, ಸೋ.ಅಂಜಲಿ ಮತ್ತು ಸೋ.ಅನಿಲ್‌ರವರು ಮಾತನಾಡಿದರು. 25ರಂದು ಸತ್ಸಂಗದ ನಂತರ ಸೋ. ರಮಾ ಕೊಚಾರ್‌ರವರು ಬಾಬೂಜಿಯವರ ಸ್ತುತಿಯಲ್ಲಿ ಭಜನೆಯೊಂದನ್ನು ಹಾಡಿದರು.

**ಉದಯಪುರ:** ಮುಂಜಾನೆಯ ಸತ್ಸಂಗದ ನಂತರ ಗುರುಗಳ ಆತ್ಮಚರಿತ್ರೆಯನ್ನು ಓದಲಾಯಿತು ಮತ್ತು ಸಹಜಮಾರ್ಗ ಪದ್ಧತಿಯ ಗುಣಗಳನ್ನು ಚರ್ಚಿಸಲಾಯಿತು. ಸೋದರಿಯರು ಹಾಡಿದ ಭಜನೆಯ ನಂತರ ಸಮೂಹಚರ್ಚೆ ನಡೆಸಲಾಯಿತು. ಮಕ್ಕಳು ಅನೇಕ ಗೀತೆಗಳನ್ನು ಹಾಡಿದರು. ಆಧ್ಯಾತ್ಮ ಆಧಾರಿತ ಆಟವೊಂದರ ನಂತರ ಆಶುಭಾಶಣಕ್ಕೆ ವಿಷಯಗಳನ್ನು ನೀಡಲಾಯಿತು.

**ಜೋಧಪುರ:** ಮೂರುದಿನಗಳ ಉತ್ಸವದಲ್ಲಿ 275 ಅಭ್ಯಾಸಿಗಳು ಪಾಲ್ಗೊಂಡಿದ್ದರು. ಅಭ್ಯಾಸಿಗಳು ಭಜನೆಗಳು ಮತ್ತು ಸ್ವಯಂಸೇವೆಯಲ್ಲಿ ತೊಡಗಿಸಿಕೊಂಡರು. ಅಧ್ಯಾತ್ಮದ ಯಾವುದೇ ಅಸ್ವಸ್ಥತೆಗೆ ಸಾಧನೆಯೇ ಮದ್ದು ಎಂದು ಚರ್ಚಿಸಲಾಯಿತು. ಸಹಜಮಾರ್ಗ ಸೇರಿದ ನಂತರ ಅನುಭವಗಳನ್ನು ಅಭ್ಯಾಸಿಗಳು ಹಂಚಿಕೊಂಡರು. ಗುರುಗಳ ಆರೋಗ್ಯಕ್ಕಾಗಿ ಎಲ್ಲರೂ ಪ್ರಾರ್ಥಿಸಿದರು.

**ಅಜ್ಮೇರ್:** 7.30 ರ ಸತ್ಸಂಗಕ್ಕೆ 48 ಅಭ್ಯಾಸಿಗಳು ಸೇರಿದ್ದರು. ಗುರುಗಳ ಉಪನ್ಯಾಸಗಳ ವಿಡಿಯೋ, ವಿಶೇಷ ವಿಸ್ಪರ್ಸ್ ಸಂದೇಶಗಳು, ಮತ್ತು ಗುರುಗಳ ಉಪನ್ಯಾಸ ವಾಚನಗಳು ಕಾರ್ಯಕ್ರಮದ ಅಂಗಗಳಾಗಿದ್ದವು. ಅಭ್ಯಾಸಿಗಳು ಮತ್ತು ಮಕ್ಕಳಿಂದ ಭಜನೆಗಳು, ಗೀತೆಗಳು ಮತ್ತು ಚಾರೀಜಿಯವರ ಜೀವನ ಆಧಾರಿತ ರಸಪ್ರಶ್ನೆ ಕಾರ್ಯಕ್ರಮಗಳು ಮುದಗೊಳಿಸಿದವು. ಸೋ. ಪಿ.ಕೆ. ಅರೋರಾರವರು ಭಂಡಾರದಲ್ಲಿ ಪಾಲ್ಗೊಳ್ಳುವುದರ ಪ್ರಾಮುಖ್ಯತೆಯನ್ನು ವಿವರಿಸಿದರು. 11ಘಂಟೆಯ ಸತ್ಸಂಗದ ನಂತರ ಉಪನ್ಯಾಸದ ವಿಡಿಯೋ ಪ್ರದರ್ಶಿಸಲಾಯಿತು. ಸಂಜೆ ಸತ್ಸಂಗವು ಸೊ. ಪಿ.ಕೆ.ಅರೋರಾರವರ ನಿಲಯದಲ್ಲಿ ನಡೆಸಲಾಯಿತು.

**ಅಲ್ವರ್:** ಆಲ್ವರದ ಯೋಗಾಶ್ರಮದಲ್ಲಿ ಜುಲೈ 23ರಿಂದ 25ರವರೆಗಿನ ಆಚರಣೆಯಲ್ಲಿ ಅಲ್ವರ ಮತ್ತು ಸಮಿಪದ ಕೇಂದ್ರಗಳಾದ ರಾಜಗಢ, ಖೈರ್‌ಥಲ್, ಕೋಟ್‌ಪುತ್ಲಿ, ಬಂದಿ ಕುಯಿ, ಮಹ್ವಾ ಮತ್ತು ಪೀಲ್ವಾದಿಂದ 160 ಅಭ್ಯಾಸಿಗಳು ಉತ್ಸವದಲ್ಲಿ ಭಾಗವಹಿಸಿದರು. ಅಭ್ಯಾಸಿಗಳು ಗುರುಗಳ ಜೀವನದ ಪ್ರೇರಣಾತ್ಮಕ ಗುಣಗಳಾದ ನಿಸ್ವಾರ್ಥ ಪ್ರೇಮ ಮತ್ತು ಸೇವೆಗಳನ್ನು ಸ್ಮರಿಸಿಕೊಂಡರು.

**ಶ್ರೀ ಗಂಗಾನಗರ್:** ಸೋ. ಪಿ.ಕೆ. ಮಿಧಾರವರ ನಿವಾಸದಲ್ಲಿ 130 ಅಭ್ಯಾಸಿಗಳು ಮತ್ತು 30 ಮಕ್ಕಳು ಹಾಜರಿದ್ದರು. ಮುಂಜಾನೆಯ ಸತ್ಸಂಗದ ನಂತರ ಗುರುಗಳ ಜೀವನದ ಕುರಿತ ಪುಸ್ತಕವಾಚನ ನಡೆಯಿತು. ಕವಿತಾವಾಚನ ಮತ್ತು ಗುರುಪೂರ್ಣಿಮೆಯ ಬಗ್ಗೆ ವಿಡಿಯೋವನ್ನು ತೋರಿಸಲಾಯಿತು. ಸಂಜೆ, ಮಕ್ಕಳು ಹಾಡುಗಳನ್ನು ಮತ್ತು ಕವಿತೆಗಳನ್ನು ಪ್ರಸ್ತುತ ಪಡಿಸಿದರು.

**ಭೀಲ್ವಾಡ:** 7.30ರ ಸತ್ಸಂಗದ ನಂತರ ಗುರುಗಳ ಮೆಚ್ಚಿನ ಭಜನೆಗಳನ್ನು ಹಾಡಲಾಯಿತು. ಕೆಲವು ಅಭ್ಯಾಸಿಗಳು ಮತ್ತು ಮಕ್ಕಳು ಕವಿತೆಗಳು ಮತ್ತು ಭಜನೆಗಳನ್ನು ಹಾಡಿದರು. “ಸತ್ಯ ಕಾ ಉದಯ್” ಪುಸ್ತಕದಿಂದ ಕೆಲ ಭಾಗಗಳನ್ನು ಪಠಿಸಲಾಯಿತು. ಕಾರ್ಯಕ್ರಮದ ಕೊನೆಗೆ “ಇನ್ಸಾನ್ ಬನೊ” ಸಿಡಿಯನ್ನು ಪ್ರದರ್ಶಿಸಲಾಯಿತು. ಮುಂಜಾನೆಯ ಧ್ಯಾನಕ್ಕೆ 50 ಮತ್ತು ಸಂಜೆ 21 ಅಭ್ಯಾಸಿಗಳು ಹಾಜರಿದ್ದರು.

# ಸಂಗತಿಯ ಪ್ರಸರಣ . . .



## ಶಿಕ್ಷಕರಿಗೆ ಪ್ರೇರಣೆ, ಕಾಶೀಪುರ,ಉತ್ತರಾಖಂಡ

ಪೂರ್ಣದಿನದಂದು, ಅಭ್ಯಾಸಿಗಳನ್ನು ಮೂರು ಗುಂಪುಗಳನ್ನಾಗಿ ವಿಂಗಡಿಸಿ ಸಾಮಾನ್ಯವಾಗಿ ಹೊಸ ಉತ್ಕಾಂಕ್ಷಿಗಳು ಕೇಳುವ ಪ್ರಶ್ನೆಗಳ ಪಟ್ಟಿ ಮಾಡಲು ತಿಳಿಸಲಾಯಿತು. ನಂತರ ಎರಡೆರಡು ಅಭ್ಯಾಸಿಗಳು ಮುಖಾಮುಖಿಯಾಗಿ ಕುಳಿತು ಪ್ರಶ್ನೋತ್ತರಗಳ ಅಣಕು ನಡೆಸಿದರು. ಅನೇಕ ವಿಚಾರಣೆಗಳು ಎದುರಾದಾಗ ಸಾಧನೆಯ ಮೂಲತತ್ವವು ತಿಳಿದಿರುವುದು ಅತಿ ಮುಖ್ಯ ಮತ್ತು ಹೊಸ ಉತ್ಕಾಂಕ್ಷಿಗಳೊಡನೆ ಹೇಗೆ ಮಾತನಾಡಬೇಕು ಎನ್ನುವುದು ತಿಳಿಯಿತು.

ನಂತರ, ಶಾಲೆಯನ್ನು ನಡೆಸುವ ಸೋದರರೊಬ್ಬರು ಶಿಕ್ಷಕರ ತಂಡವೊಂದಕ್ಕಾಗಿ ಆಗಸ್ಟ್ 7ರಂದು ಕೂಟವನ್ನು ಆಯೋಜಿಸಿದ್ದರು. ಶಿಕ್ಷಕರಿಗೆ ಕಿರುಪುಸ್ತಿಕೆಯೊಡನೆ ಸಹಜಮಾರ್ಗವನ್ನು ಮುಂಚಿತವಾಗಿ ಪರಿಚಯಿಸಲಾಗಿತ್ತು. ಚಿಕ್ಕ, ಪ್ರತ್ಯೇಕ ಗುರಿಗಳು ಮತ್ತು ಜೀವನದ ನಿಜವಾದ ಗುರಿಗಳ ಅರ್ಥ ಹಾಗೂ ಅವುಗಳ ನಡುವಿನ ವ್ಯತ್ಯಾಸವನ್ನು ವಿವರಿಸಲಾಯಿತು. ನಂತರ ಮತದಿಂದ ಆಧ್ಯಾತ್ಮಕ್ಕೆ ಪ್ರಗತಿಯನ್ನು ವಿವರಿಸಿ ಸಾಧನೆಯ ಬಗ್ಗೆ ಅರಿವು ಮೂಡಿಸುವುದರೊಂದಿಗೆ ಮುಗಿಸಲಾಯಿತು.ಉಪನ್ಯಾಸವನ್ನು ತನ್ಮಯತೆಯಿಂದ ಆಲಿಸಿದ ಶಿಕ್ಷಕರಲ್ಲಿ ಅನೇಕರು ಇಂತಹ ವಿಚಾರಗಳನ್ನು ತಾವು ಈ ಮೊದಲು ಕೇಳಿಯೇ ಇರಲಿಲ್ಲವೆಂದು ಉದ್ಗರಿಸಿದರು.

ದೊಡ್ಡ ಪ್ರಮಾಣದ ಮುಕ್ತಸಭೆಗಳಿಗಿಂತ ಚಿಕ್ಕ ಗುಂಪುಗಳೊಡನೆ ಹೊಂದಿಕೊಂಡು ಹಿಂಜರಿಕೆಯಿಲ್ಲದೆ ಮಾತನಾಡುವುದು ಸುಲಭವೆಂದು ಗಮನಕ್ಕೆ ಬಂದ ವಿಷಯ. ಹದಿನೈದು ಶಿಕ್ಷಕರೊಡನೆ ಸುಮಾರು ಒಂದೂವರೆ ಘಂಟೆ ಕಾಲ ನಡೆದ ಸಭೆಯು ಪ್ರಶ್ನೋತ್ತರದೊಂದಿಗೆ ಮುಕ್ತಾಯಗೊಂಡಿತು.

## ಪೋಲೀಸ್ ಅಧಿಕಾರಿಗಳೊಡನೆ ಸಂವಾದ, ಮೈಸೂರು

ಮೈಸೂರಿನ ಕರ್ನಾಟಕ ಪೋಲೀಸ್ ಅಕಾಡೆಮಿಯಲ್ಲಿ ತರಬೇತಿಯಲ್ಲಿರುವ ಹತ್ತೊಂಬತ್ತು ಸಬ್–ಇನ್ಸ್‌ಪೆಕ್ಟರ್‌ಗಳು ಮತ್ತು ನೇರವಾಗಿ ನಿಯುಕ್ತಗೊಂಡ ಮೂವತ್ತೊಂಬತ್ತು ಪೋಲೀಸ್ ಉಪ ಆಯುಕ್ತರನ್ನು ಸಂಬೋಧಿಸಲು ಆಗಸ್ಟ್ 16, 2012ರಂದು ಮಿಷನ್ನಿನ ಜಂಟಿ ಕಾರ್ಯದರ್ಶಿಗಳಾದ ಸೋ. ಎ.ಪಿ. ದುರೈರವರನ್ನು ಆಹ್ವಾನಿಸಲಾಗಿತ್ತು. ಐಜಿಪಿ ಹಾಗೂ ಅಕಾಡೆಮಿಯ ನಿರ್ದೇಶಕರಾದ ಐಪಿಎಸ್ ಅಧಿಕಾರಿ ಶ್ರೀ ಅಮರ್ ಕುಮಾರ್ ಪಾಂಡೆರವರು ಅವರನ್ನು ಪರಿಚಯಿಸುತ್ತಾ ಕರ್ನಾಟಕದ ಪೋಲೀಸ್ ಅಧಿಕಾರಿಯಾಗಿ ಆದರ್ಶಪ್ರಾಯರಾದ ಅವರು 1996–97ರಲ್ಲಿ ರಾಜ್ಯದ ಉಪ ವರಿಷ್ಠಾಧಿಕಾರಿಯಾಗಿ ಮಾಡಿದ ಸಾಧನೆಗಳು ಅಪಾರ ಎಂದರು.

ಸೋ. ದುರೈರವರು "ಪೋಲೀಸ್ ಅಧಿಕಾರಿಗಳಿಗಾಗಿ ಚಾರಿತ್ರ್ಯ ಮತ್ತು ವ್ಯಕ್ತಿತ್ವ ವಿಕಸನ" ವಿಷಯದ ಕುರಿತು ಮಾತನಾಡಿದರು. ಸಂದರ್ಭಕ್ಕನುಗುಣವಾಗಿ ಅವರು ಗುರುಗಳ ಬೋಧನೆಗಳನ್ನು ಉಲ್ಲೇಖಿಸುತ್ತಾ ನಮ್ಮ ಜೀವನದಲ್ಲಿ ಕರ್ಮವು ಹೇಗೆ ಕಾರ್ಯನಿರ್ವಹಿಸುತ್ತದೆ ಮತ್ತು ಹೇಗೆ ನಮ್ಮೆಲ್ಲಾ ಆಲೋಚನೆಗಳು ಮತ್ತು ಕೆಲಸಗಳಿಗೆ ನಾವೇ ಜವಾಬ್ದಾರರು ಎಂದು ವಿವರಿಸಿದರು. ನಮ್ಮ ಅಂತರಾತ್ಮದ ಕರೆಗೆ ಓಗೊಟ್ಟು, ಯಾವುದೇ ಭಯ ಅಥವಾ ದಾಕ್ಷಿಣ್ಯಕ್ಕೆ ಒಳಗಾಗದೇ ಕರ್ತವ್ಯವನ್ನು ಪಾಲಿಸಬೇಕೆಂಬ ಅವರ ವಿಚಾರವು ಅವರೆಲ್ಲರ ಮೇಲೆ ಪ್ರಭಾವ ಬೀರಿತು.

ಯೇಸು ಕ್ರಿಸ್ತನ ಹಾಗೂ ಭಗವದ್ಗೀತೆಯ ಸೂಕ್ತಿಗಳನ್ನು ಅಭ್ಯರ್ಥಿಗಳು ಆಲಿಸಿದ ನಂತರ ತಮ್ಮ ಅನಿಸಿಕೆಗಳನ್ನು, ಪ್ರಶ್ನೆಗಳನ್ನು ಭಾಷಣಕಾರರೊಡನೆ ಚರ್ಚಿಸಲು ಮುಕ್ತ ಅವಕಾಶವಿತ್ತು. ಸಭೆಯು ತೊಂಭತ್ತು ನಿಮಿಷಗಳ ಕಾಲ ನಡೆದಿದ್ದು ಪ್ರತಿಕ್ಷಣ ಗುರುಗಳ ಉಪಸ್ಥಿತಿ ಮತ್ತು ಪ್ರೇರಣೆಯ ಅನುಭವವಾಯಿತು.

## ವಿದ್ಯಾರ್ಥಿಗಳು ಮತ್ತು ಯುವಜನ, ಕೊಲ್ಕಾತಾ

ಹೆರಿಟೇಜ್ ತಾಂತ್ರಿಕ ವಿದ್ಯಾಲಯದ ಹೊಸ ಉತ್ಕಾಂಕ್ಷಿಗಳ ಪುಟ್ಟ ಗುಂಪಿಗಾಗಿ ಕೊಲ್ಕಾತಾ ಆಶ್ರಮದಲ್ಲಿ ಆಗಸ್ಟ್ 12ರಂದು ಮುಕ್ತಸಭೆಯನ್ನು ಆಯೋಜಿಸಲಾಗಿತ್ತು. ಸ್ವಾಗತ ಭಾಷಣದ ನಂತರ ಕೊಲ್ಕಾತಾ ಕೇಂದ್ರಸಂಚಾಲಕರಾದ ಸೋ. ಮಿಸಾಲ್ ಮೆಹ್ತಾರವರು ಸಹಜಮಾರ್ಗದ ಮೂಲತತ್ವಗಳ ಬಗ್ಗೆ ವಿಸ್ತಾರವಾದ ಪ್ರಸ್ತುತಿ ನೀಡಿದರು. ಮಾನವನು 'ಸಾಮಾಜಿಕ–ಆರ್ಥಿಕ ಕವಚ'ವನ್ನೇ ನಿಜವಾದ ಪ್ರಪಂಚವೆಂದು ತಿಳಿದು 'ಪ್ರಾಕೃತಿಕ ಸೃಷ್ಟಿ'ಯಿಂದ ವಂಚಿತನಾಗುತ್ತಾನೆ ಎಂದು ಪ್ರಾರಂಭಿಸಿದ ಅವರು ಯೋಗ ಮತ್ತು ಧ್ಯಾನದ ತತ್ವಗಳನ್ನು ಉದಾಹರಣಾಸಹಿತವಾಗಿ ವಿವರಿಸಿದರು.

ನಂತರ, ನಾಲ್ಕು ಯುವ ಇಂಜಿನಿಯರ್ ಅಭ್ಯಾಸಿಗಳನ್ನು ಕೆಲ ನಿಮಿಷಗಳ ಕಾಲ ಮಾತನಾಡಲು ಕೇಳಿದಾಗ ಅವರು ತಾವು ಮಿಷನ್ ಸೇರಿದ ಕಾರಣ ಮತ್ತು ತಮ್ಮ ಅನುಭವಗಳನ್ನು ಹಂಚಿಕೊಂಡರು. ಕಾರ್ಯಕ್ರಮವು ಲಘು ಪ್ರಶ್ನೋತ್ತರದೊಡನೆ ಮುಕ್ತಾಯಗೊಂಡಿತು. ಪಾಲ್ಗೊಂಡ ಎಪ್ಪತ್ತು ಜನರಿಗೂ ಸಹಜಮಾರ್ಗದ ಪರಿಚಯ ಪುಸ್ತಿಕೆಯನ್ನು ಹಂಚಲಾಯಿತು. ಅವರಲ್ಲಿ ಮೂವತ್ತು ಹೆರಿಟೇಜ್ ವಿದ್ಯಾಲಯದ ವಿದ್ಯಾರ್ಥಿಗಳಾದರೆ ಉಳಿದವರು ಆಸಕ್ತಿಯುಳ್ಳವರು ಮತ್ತು



ಅಭ್ಯಾಸಿಗಳಾಗಿದ್ದರು. ಅಂದು ಧನಾತ್ಮಕ ಪ್ರತಿಕ್ರಿಯೆ ದೊರೆತಿದ್ದು ಹಲವರು ಬೈಠಕ್ ತೆಗೆದುಕೊಳ್ಳಲು ಆಸಕ್ತಿ ತೋರಿದರು.

## ತಿರುಪ್ಪೂರು ಆಶ್ರಮದಲ್ಲಿ ಮುಕ್ತಸಭೆ

ಸಾಕಷ್ಟು ಮುಂಚಿತವಾಗಿ ಕಳಿಸಿದ ಸುತ್ತೋಲೆಯ ಕಾರಣ ಆಗಸ್ಟ್ 12ರಂದು ತಿರುಪ್ಪೂರಿನ ಚೆಟ್ಟಿಪಾಳ್ಯಂ ಯೋಗಾಶ್ರಮದ ಸ್ವಯಂಸೇವಕರು ಸುಮಾರು 75 ಆಹ್ವಾನಿತರನ್ನು ಬರಮಾಡಿಕೊಂಡರು. ಕೇಂದ್ರ ಸಂಚಾಲಕರಾದ ಸೋ. ರವಿ ಸುಬ್ಬಿಯನ್‌ರವರು ಅತಿಥಿಗಳನ್ನು ಸ್ವಾಗತಿಸಿ ಸಾಧನೆ ಪ್ರಾರಂಭಿಸಲು ಬೇಕಾದ ಅರ್ಹತೆಗಳನ್ನು ವಿವರಿಸಿದರು. ಕೆಲವು ಸ್ವಯಂಸೇವಕರು ತಾವು ಮಿಷನ್ನನ್ನು ಸೇರಲು ಪ್ರಚೋದಿಸಿದ ಸಂದರ್ಭಗಳ ಕುರಿತ ಅನುಭವಗಳನ್ನು ಮತ್ತು ಹೇಗೆ ಸಾಧನೆಯ ಲಾಭ ಪಡೆದೆವೆಂಬುದನ್ನು ಹಂಚಿಕೊಂಡರು .

ಅದೇ ದಿನ ಐವತ್ತು ಆಹ್ವಾನಿತರು ಮೊದಲ ಬೈಠಕನ್ನು ತೆಗೆದುಕೊಂಡದ್ದರಿಂದ ಸಂಜೆ ನಾಲ್ಕು ಘಂಟೆವರೆಗೂ ಬೈಠಕುಗಳು ನಡೆದವು. ಇಂತಹ ಅದ್ಭುತ ಪ್ರತಿಕ್ರಿಯೆ ಕೇವಲ ಗುರುಗಳ ಅನುಗ್ರಹದಿಂದ ಮಾತ್ರ ಸಾಧ್ಯವೆಂದು ತಿಳಿಯಿತು.

## ಯುವ ಕಾರ್ಯಕ್ರಮ, ಮೈಸೂರು

12 ಆಗಸ್ಟ್, 2012ರಂದು ಸಂಯುಕ್ತ ರಾಷ್ಟ್ರಗಳ ಅಂತರಾಷ್ಟ್ರೀಯ ಯುವ ದಿನಾಚರಣೆಯ ಪ್ರಯುಕ್ತ ಬೆಂಗಳೂರಿನಿಂದ ಸುಮಾರು ಮೂವತ್ತು ಯುವಅಭ್ಯಾಸಿಗಳು ಮೈಸೂರು ಆಶ್ರಮಕ್ಕೆ ಹಿಂದಿನ ಸಂಜೆಯೇ ಪ್ರಯಾಣಿಸಿದರು. ಪ್ರಯಾಣದ ಸಮಯದಲ್ಲಿ ಪರಸ್ಪರ ಪರಿಚಯಿಸಿಕೊಳ್ಳುವ ಅವಕಾಶ ದೊರೆತಿದ್ದು, ಭೋಜನಕಾಲದಲ್ಲಿ ಎಲ್ಲರನ್ನೂ ತಾವು ಆಗಷ್ಟೇ ಭೇಟಿಯಾದ ಒಬ್ಬರನ್ನು ಪರಿಚಯಿಸಲು ಹೇಳಲಾಯಿತು. ವಿಶ್ವ ಪ್ರಾರ್ಥನೆಯ ನಂತರ 'ಕಿಂಗ್ಸ್ ಸ್ಪೀಚ್' ಎನ್ನುವ ಚಲನಚಿತ್ರವನ್ನು ತೋರಿಸಲಾಯಿತು.

ಮರುದಿನ ವೈಯಕ್ತಿಕ ಧ್ಯಾನದ ನಂತರ ಕ್ರಿಕೆಟ್, ಆಶ್ರಮದಲ್ಲಿ ನಡಿಗೆ ಮತ್ತು ಕೆಲವು ಆಟಗಳಿಗೆ ಸಮಯ ಕಾದಿರಿಸಲಾಗಿತ್ತು. ಕಾರ್ಯಕ್ರಮದಲ್ಲಿ ಮೈಸೂರಿನ ಕೆಲವು ಯುವಜನರೂ ಜೊತೆಗೂಡಿದರು. ಸತ್ಸಂಗ ಮತ್ತು ಉಪಾಹಾರದ ನಂತರ 9.30ಕ್ಕೆ ಸಭೆಯು ಒಮೇಗಾ ಶಾಲೆಯ ಮೊದಲಿನ ವಿದ್ಯಾರ್ಥಿಗಳಿಗೆ ಗುರುಗಳು ನೀಡಿದ ಉಪನ್ಯಾಸವನ್ನು ಕೇಳಿಸಿದರು. ಉಪನ್ಯಾಸ ಕುರಿತ ಚರ್ಚೆಯನ್ನು ಸೋ. ಪ್ರಿಯಾ ಹೆಗಡೆಯವರು ನಡೆಸಿಕೊಟ್ಟರು.

ಭಾಗಿಗಳನ್ನು ಎರಡು ಗುಂಪುಗಳನ್ನಾಗಿ ವಿಂಗಡಿಸಲಾಗಿ ಅವರಿಗೆ ಆಲೂಗಡ್ಡೆಯೊಂದನ್ನು ನೀಡಿ ಅದನ್ನು ತಮ್ಮ ಸ್ನೇಹಿತನೆಂದು ಪರಿಗಣಿಸಿ ಕಥೆಯೊಂದರಿಂದ ಎಲ್ಲರಿಗೂ ಪರಿಚಯಿಸಬೇಕಿತ್ತು. ಇದಕ್ಕೆ ಸೃಜನಶೀಲತೆ ಮತ್ತು ಆಲೋಚನೆಗಳು ಬೇಕಾಗಿದ್ದು ಆಧ್ಯಾತ್ಮ ಮತ್ತು ಲೌಕಿಕತೆಯನ್ನೊಳಗೊಂಡ ಹಾಸ್ಯಭರಿತ ಕಥೆಗಳು ಹೊರಹೊಮ್ಮಿದವು. ಬಿಡುವಿನ ನಂತರ ಪ್ರತಿಯೊಬ್ಬರಿಗೂ ಗುರುಗಳ ಉಕ್ತಿಯೊಂದನ್ನು ಹೊಂದಿದ ಚೀಟಿಗಳಲ್ಲಿ ಒಂದನ್ನು ಆಯ್ದು ಮಾತನಾಡುವ ಅವಕಾಶವಿದ್ದಿತು. ನಂತರ ಗುಂಪನ್ನು ತಂಡಗಳನ್ನಾಗಿ ವಿಂಗಡಿಸಿ ಸೋ.ಅನನ್ಯಾರವರು ಸಾಮಾನ್ಯಜ್ಞಾನದ ರಸಪ್ರಶ್ನೆಯನ್ನು ನಡೆಸಿಕೊಟ್ಟರು.

ಒಟ್ಟಿನಲ್ಲಿ ಕಾರ್ಯಕ್ರಮವು ಚಿಕ್ಕದಾಗಿ, ಚೊಕ್ಕವಾಗಿ ಪರಿಣಾಮಕಾರಿಯಾಗಿತ್ತು ಹಾಗೂ ಪ್ರತಿಯೊಬ್ಬರಿಗೂ ಇದು ಆತ್ಮಪರೀಕ್ಷಣೆ ಮಾಡಿಕೊಳ್ಳಲು, ಸೋದರ–ಸೋದರಿಯರೊಡನೆ ಭ್ರಾತೃತ್ವ ಬೆಳೆಸಿ ಹಂಚಿಕೊಳ್ಳಲು ಅವಕಾಶ ದೊರೆಯಿತು.






## ಚಿತ್ರಕಲೆ ಕಾರ್ಯಕ್ರಮ, ಭಿಲ್ವಾರ, ರಾಜಸ್ಥಾನ

'ಪ್ರಕೃತಿ' ವಿಷಯಾಧಾರಿತ ಚಿತ್ರಕಲೆ ಸ್ಪರ್ಧೆಯೊಂದನ್ನು 8–16ವಯೋಮಾನದ ಮಕ್ಕಳಿಗಾಗಿ ಮತ್ತು 'ನಿರೀಕ್ಷೆ' ವಿಷಯದ ಮೇಲೆ ಪ್ರಬಂಧ ಸ್ಪರ್ಧೆಯನ್ನು 18–30 ವಯೋಮಾನದ ಯುವಜನಕ್ಕಾಗಿ ಬೇಸಿಗೆಯಲ್ಲಿ ಆಯೋಜಿಸಲಾಗಿತ್ತು. ಜುಲೈ 8ರಂದು ಅದರ ಫಲಿತಾಂಶವನ್ನು ಪ್ರಕಟಿಸಲಾಗಿ ಎಲ್ಲಾ ಚಿತ್ರಗಳನ್ನು ಧ್ಯಾನಮಂದಿರದಲ್ಲಿ ಪ್ರದರ್ಶಿಸಲಾಯಿತು. ಎಲ್ಲರನ್ನೂ ಆಕರ್ಷಿಸಿದ ಚಿತ್ರವೊಂದರಲ್ಲಿ ಪ್ರಕೃತಿಯ ಬಗ್ಗೆ ಮಗು, ಹಳ್ಳಿಗ ಮತ್ತು ನಗರವಾಸಿಯ ಪ್ರತ್ಯೇಕ ದೃಷ್ಟಿಕೋನಗಳನ್ನು ಬಿಂಬಿಸಲಾಗಿತ್ತು.

## ಯುವ ಕಾರ್ಯಕ್ರಮ, ಕೊಲ್ಕಾತಾ, ಪಶ್ಚಿಮ ಬಂಗಾಳ

ಕೊಲ್ಕಾತಾ ಆಶ್ರಮದಲ್ಲಿ 18–35 ವಯೋಮಾನದ ಸುಮಾರು 100 ಅಭ್ಯಾಸಿಗಳು ಇದ್ದರೂ ಅವರಲ್ಲಿ ಕೇವಲ 15–20 ಜನ ಮಾತ್ರ ಭಾನುವಾರದ ಸತ್ಸಂಗ ಮತ್ತಿತರ ಆಶ್ರಮದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆಂದು ತಿಳಿದುಬಂದಿತು. ಅವರೆಲ್ಲರನ್ನೂ ಒಟ್ಟುಗೂಡಿಸಿ ಅವರಲ್ಲಿ ಸಕ್ರಿಯತೆಯನ್ನು ಪ್ರೇರೇಪಿಸಲು ಕೆಲವು ಅಭ್ಯಾಸಿಗಳು ನಿರ್ಧರಿಸಿ ಕಾರ್ಯಸನ್ನದ್ಧರಾದರು.

ಗುಂಪಿನ ಮಾಹಿತಿಕೋಶ ಹೊಂದಲು, ಸತ್ಸಂಗದ ನಂತರ ಪುಸ್ತಕ ವಾಚನ ಆಯೋಜಿಸಲು, ಕ್ರಿಕೆಟ್ ಮುಂತಾದ ಹೊರಾಂಗಣ ಕ್ರೀಡೆಗಳಲ್ಲಿ ಪಾಲ್ಗೊಳ್ಳುವುದು ಇತ್ಯಾದಿ ಸಲಹೆಗಳು ದೊರೆತವು. ಸತತ ಮೂರು ಭಾನುವಾರಗಳಂದು ಸ್ಥಾಪಿಸಲಾದ ಯುವಮಳಿಗೆಯು ಅಭ್ಯಾಸಿಗಳು ತಮ್ಮನ್ನು ನೋಂದಣೀಕರಿಸಲು ಉತ್ತೇಜಿಸಿತು.

ತದನಂತರ, ಜುಲೈ 2012ರಿಂದಲೂ ಪ್ರತೀ ಭಾನುವಾರ ಎರಡು ಘಂಟೆಗಳ ಅನೌಪಚಾರಿಕ ಸಂವಾದವನ್ನು ಆಯೋಜಿಸಲಾಗುತ್ತಿದ್ದು ಭಾಗಿಗಳ ಸಂಖ್ಯೆ ಹೆಚ್ಚುತ್ತಲೇ ಇದೆ. ಇದು ಸಾಧನೆಯ ಪ್ರಮುಖ ಅಂಶಗಳನ್ನು ಒಳಗೊಂಡ ಪ್ರತಿಸ್ಪಂದಿತ ಚರ್ಚೆಯಾಗಿದ್ದು ಅಭ್ಯಾಸಿಗಳು ತಮ್ಮಲ್ಲಾದ ಬದಲಾವಣೆಗಳ ಅನುಭವಗಳನ್ನು ಹಂಚಿಕೊಳ್ಳಲು, ಗುರುಗಳ ಉಪನ್ಯಾಸಗಳ ಪುಸ್ತಕವಾಚನದೊಡನೆ ಆತ್ಮಪರೀಕ್ಷಣೆಗೆ ಪ್ರೇರೇಪಣೆ ನೀಡುತ್ತಿದೆ. ಗುರುಗಳ ಮಾರ್ಗದರ್ಶನದಡಿ ಈ ಗುಂಪು ಬೆಳೆಯಲೆಂದು ನಮ್ಮ ಆಶಯ.

# ದೆಹಲಿ ಆಶ್ರಮ

## ಪ್ರಭಾಕೇಂದ್ರ





ದೆಹಲಿ ನಗರದ ಮಧ್ಯಭಾಗದ ಕೆ.ಆರ್.ಪುರಂನಲ್ಲಿ ಒಂದು ಆಶ್ರಮ ಹಾಗೂ ಮತ್ತೊಂದು ದೆಹಲಿ–ಹರಿಯಾಣದ ಗಡಿಭಾಗದಲ್ಲಿದೆ. ಎರಡನೆಯದು ವಲಯಾಶ್ರಮವಾಗಿದ್ದು, ಗುರ್‌ಗಾಂವ್ ಆಶ್ರಮವೆಂದು ಪ್ರಚಲಿತವಾಗಿದೆ. ಇದು ಅಂತರ್ರಾಷ್ಟ್ರೀಯ ವಿಮಾನನಿಲ್ದಾಣದಿಂದ 12 ಕಿ.ಮೀ. ಮತ್ತು ದೇಶೀಯ ವಿಮಾನನಿಲ್ದಾಣದಿಂದ 15ಕಿ.ಮೀ. ದೂರದಲ್ಲಿದೆ.



ಆಶ್ರಮವು 6.5ಎಕರೆ ಜಾಗ ಹೊಂದಿದ್ದು 15 ಜೂನ್ 2001ರಂದು ಸದ್ಗುರುಗಳಿಂದ ಉದ್ಘಾಟಿಸಲ್ಪಟ್ಟಿತು. ಧ್ಯಾನಮಂದಿರದಲ್ಲಿ ಸುಮಾರು 2000 ಜನಕ್ಕೆ ಸ್ಥಳಾವಕಾಶವಿದೆ. ಮೊದಲಿಗೆ ಮಣಪಾಕ್ಕಂ ಆಶ್ರಮದ ಮೊದಲಿನ ಧ್ಯಾನಮಂದಿರದ ಕಲ್ನಾರಿನ ತಗಡು ಮತ್ತು ಕಬ್ಬಿಣದ ಪಟ್ಟಿಗಳನ್ನು ಛಾವಣಿಗೆ ಬಳಸಲಾಗಿತ್ತು. ದುರಸ್ತಿ ಸಮಯದಲ್ಲಿ ಛಾವಣಿಗೆ ಲೋಹದ ತಗಡನ್ನು ಹೊದಿಸುವುದರೊಡನೆ ಧ್ಯಾನಮಂದಿರವನ್ನು ಆಚೀಚೆ ಮತ್ತಷ್ಟು ವಿಸ್ತರಿಸಲಾಯಿತು. ಬೇಸಿಗೆಯ ಧಗೆಯಲ್ಲಿ ಛಾವಣಿಯನ್ನು ತಂಪುಗೊಳಿಸಲು ನೀರು ಹನಿಸುವ ವ್ಯವಸ್ಥೆಯಿದೆ. ಅದರ ಜೊತೆಗೆ ಛಾವಣಿಯನ್ನು ನೇರ ಬಿಸಿಲಿನಿಂದ ರಕ್ಷಿಸಲಾಗಿದ್ದು, ಧ್ಯಾನಮಂದಿರದಲ್ಲಿ ಸೆಖೆಯು ಗಣನೀಯವಾಗಿ ಕಡಿಮೆಯಾಗಿದೆ.



ಧ್ಯಾನಮಂದಿರದ ಪಕ್ಕದಲ್ಲಿರುವ ಗುರುಗಳ ಕಚೇರಿಯೆದುರು ಹುಲ್ಲುಹಾಸಿದ್ದು ಅವರು ಭೇಟಿ ನೀಡಿದಾಗಲೆಲ್ಲಾ ಅಲ್ಲಿ ವಿರಾಜಿಸುತ್ತಾರೆ. ಈ ಕಟ್ಟಡವನ್ನು ಗುರುಗಳು 20 ಏಪ್ರಿಲ್ 2008 ಉದ್ಘಾಟಿಸಿ ಎದುರಿಗೆ ಎರಡು ಸಸಿಗಳನ್ನು ನೆಟ್ಟರು. ಅವರು ಗುರ್‌ಗಾಂವ್ (ಗುರು+ಗಾಂವ್) ಹೆಸರು ಬರಲು ಕಾರಣೀಭೂತರೆನ್ನಲಾದ ದ್ರೋಣಾಚಾರ್ಯರ ಶಿಲ್ಪವನ್ನು ಸಹ ಅನಾವರಣಗೊಳಿಸಿದರು.



ಆಶ್ರಮದ ಒಂದು ಮೂಲೆಯಲ್ಲಿರುವ ವಿಸ್ತಾರವಾದ ಪಾಕಶಾಲೆಯ ಒಂದು ಭಾಗವು ಕ್ಯಾಂಟೀನ್ ಆಗಿ ಕಾರ್ಯನಿರ್ವಹಿಸುತ್ತದೆ. ಆಧುನಿಕ ಶೌಚಾಲಯ ವಿಭಾಗದಲ್ಲಿ ಬೃಹತ್ ಸಮಾವೇಶಗಳ ಸಂದರ್ಭದಲ್ಲಿ ಅಧಿಕ ಸ್ಥಳಕ್ಕಾಗಿ ಅವಕಾಶವಿದೆ. ಆಸ್ರಮದಲ್ಲಿ ಸಾಕಷ್ಟು ವಾಹನನಿಲುಗಡೆ ಸ್ಥಳವಿದೆ. ಮಕ್ಕಳ ಕೇಂದ್ರ ಮತ್ತು ಪುಸ್ತಕ ಮಳಿಗೆಗಳು ಮುಖ್ಯದ್ವಾರದ ಬಳಿಯಿದ್ದು, ಮಕ್ಕಳಿಗೆ ಹೊರಭಾಗದಲ್ಲಿ ಆಡಲು ಸ್ಥಳವಿದೆ. ಆಶ್ರಮದ ಅರ್ಧಕ್ಕಿಂತ ಅಧಿಕ ಭಾಗದಲ್ಲಿ ಸಾವಯವ ತರಕಾರಿಗಳನ್ನು ಬೆಳೆಸಲಾಗುತ್ತಿದೆ. ನಾಲ್ಕು ತೋಟಗಾರರು ಮತ್ತು ಒಬ್ಬ ಚೌಕೀದಾರ ತಮ್ಮ ಸಂಸಾರದೊಡನೆ ಆಶ್ರಮದಲ್ಲಿ ವಾಸಿಸುತ್ತಿದ್ದಾರೆ. ಸಂಸ್ಥೆಯ ಪ್ರಕಟನೆಗಳನ್ನು ಸಮೀಪದ ಕೇಂದ್ರಗಳಿಗೆ ವಿತರಿಸುವುದೂ ಇದೇ ಕೇಂದ್ರದಿಂದ. ಪ್ರತೀ ತಿಂಗಳ ಮೊದಲ ಭಾನುವಾರದಂದು ಪೂರ್ಣದಿನದ ಕಾರ್ಯಕ್ರಮವಿರುತ್ತದೆ.



31 ಮೇ 2009ರಂದು ಆಶ್ರಮದಲ್ಲಿ ಸತ್ಸಂಗದ ನಂತರ ಗುರುಗಳು ಪ್ರಪಂಚದಾದ್ಯಂತ ಮುಂಜಾನೆಯ ಸತ್ಸಂಗದ ಸಮಯವನ್ನು 7.30ಕ್ಕೆ ಬದಲಿಸಿದರು. ಮಾನವನ ಅಸ್ತಿತ್ವದ ಉದ್ದೇಶಕ್ಕೆ ಒತ್ತುನೀಡುತ್ತಾ ಅವರು ಹೇಳಿದರು, "ನಾವು ನಮ್ಮ ಜೀವನದಲ್ಲಿ ಮಾಡುವ–ಉಸಿರಾಡುವುದು, ತಿನ್ನುವುದು, ಕುಡಿಯುವುದು, ವಿಶ್ರಾಂತಿ, ನಿದ್ರೆ– ಎಲ್ಲವೂ ಬದುಕಲು ಎನ್ನುವ ನಿಯಮಕ್ಕೆ ಅಧೀನವಾಗಿವೆ ಮತ್ತು ಬದುಕುವುದು ಈ ಮಾನವ ಮಟ್ಟದಿಂದ ದೈವೀಕತೆಯೆಡೆಗಿನ ಪ್ರಗತಿ ಸಾಧಿಸಲೆಂಬ ಒಂದೇ ಉದ್ದೇಶಕ್ಕಾಗಿ ಮಾತ್ರ ಎಂಬ ಅರಿವನ್ನು ನಾನು ನಿಮ್ಮೆಲ್ಲರಲ್ಲಿ ಮೂಡಿಸಲು ಇಚ್ಛಿಸುತ್ತೇನೆ."

**To download or subscribe to this newsletter, please visit http://www.sahajmarg.org/newsletter/india For feedback, suggestions and news articles please send email to in.newsletter@srcm.org**
© 2011 Shri Ram Chandra Mission ("SRCM"). All rights reserved. "Shri Ram Chandra Mission", "Sahaj Marg", "SRCM", "Constant Remembrance" and the Mission's Emblem are registered Trademarks of Shri Ram Chandra Mission.This Newsletter is intended exclusively for the members of SRCM. The views expressed in the various articles are provided by various volunteers and are not necessarily those of SRCM.